ಜೆಎಸ್‌ಎಸ್ ಮಹಾವಿದ್ಯಾಪೀಠದ
ನೌಕರರ ಗೃಹ ನಿರ್ಮಾಣ ಸಹಕಾರ ಸಂಘ (ಠ).

32, 11ನೇ ಬ್ಲಾಕ್, ಡಾ. ರಾಜಕುಮಾರ್ ರಸ್ತೆ,
ಜೆಎಸ್‌ಎಸ್ ಬಡಾವಣೆ, ಮೊದಲನೇ ಹಂತ, ಮೈಸೂರು – 570029
ದೂರವಾಣಿ ಸಂಖ್ಯೆ : 0821–2470798
ಇ–ಮೇಲ್: presidentjssmvpehbcs@gmail.com ವೆಬ್‌ಸೈಟ್: www.jssmvpehbcs.org
GSTIN: 29AABAJ3348QIZ2

2025–26ನೇ ಸಾಲಿನ ಸರ್ವಸದಸ್ಯರ
ವಾರ್ಷಿಕ ಮಹಾಸಭೆ

ಆಹ್ವಾನ ಪತ್ರಿಕೆ

20 ಸೆಪ್ಟೆಂಬರ್ 2026, ಭಾನುವಾರ
ಬೆಳಗ್ಗೆ 10.00

ಸ್ಥಳ
ಸುವರ್ಣ ಮಹೋತ್ಸವ ಭವನ
ಜೆಎಸ್‌ಎಸ್ ಕಾಲೇಜು, ಊಟಿ ರಸ್ತೆ
ಮೈಸೂರು – 570 025

ಸೂಚನೆಗಳು

1. ಸದಸ್ಯರು ತಾವು ಚರ್ಚಿಸಬೇಕೆಂದಿರುವ ವಿಷಯಗಳನ್ನು ಲಿಖಿತ ಮೂಲಕ ಸಂಘಕ್ಕೆ 12/09/2026 ರೊಳಗಾಗಿ ಕಳುಹಿಸಿಕೊಡುವುದು.
2. ಸದಸ್ಯರುಗಳು ತಮ್ಮ ವಿಳಾಸ ಬದಲಾವಣೆಯಾಗಿದ್ದಲ್ಲಿ ಬದಲಾದ ವಿಳಾಸವನ್ನು ಲಿಖಿತವಾಗಿ ಸಂಘದ ಕಛೇರಿಗೆ ತಿಳಿಸುವುದು.
3. ಇದುವರೆವಿಗೂ ಸಂಘದಿಂದ ಪಾಸ್‌ಪುಸ್ತಕ ಹಾಗೂ ಗುರುತಿನ ಚೀಟಿಯನ್ನು ಪಡೆಯದ ಸದಸ್ಯರುಗಳು ಕಡ್ಡಾಯವಾಗಿ ಮೂರು (3) ಭಾವಚಿತ್ರಗಳನ್ನು ಸಂಘಕ್ಕೆ ತಲುಪಿಸಿ ಖುದ್ದಾಗಿ ಸಂಘದ ಕಛೇರಿಗೆ ಬಂದು ತಮ್ಮ ರಶೀತಿ ಹಾಜರುಪಡಿಸಿ ಪಾಸ್‌ಪುಸ್ತಕ ಹಾಗೂ ಗುರುತಿನ ಚೀಟಿಯನ್ನು ಪಡೆಯುವುದು.
4. ಸಹಕಾರ ಸಂಘಗಳ ನಿಯಮ ಮತ್ತು ಸಂಘದ ಬೈಲಾ ರೀತ್ಯಾ ಪ್ರವೇಶ ಧನ ರೂ 95/– ಬಾಕಿ ಷೇರು ಫೀ ರೂ 90/– ಮತ್ತು ಷೇರು ಧನ ರೂ 900/– ಒಟ್ಟು ರೂ 1,085/– ಗಳನ್ನು ಕೂಡಲೆ ಸಂಘಕ್ಕೆ ಪಾವತಿಸಿ ರಶೀತಿ ಪಡೆಯುವುದು. **ದಿನಾಂಕ 31.12.2026 ರೊಳಗೆ ಬಾಕಿ ಷೇರು ಫೀ ಮತ್ತು ಷೇರು ಧನವನ್ನು ಪಾವತಿಸದಿದ್ದ ಪಕ್ಷದಲ್ಲಿ ಸದಸ್ಯತ್ವವು ರದ್ದಾಗುವುದೆಂದು ಈ ಮೂಲಕ ಸದಸ್ಯರುಗಳ ಗಮನಕ್ಕೆ ತರಲಾಗುತ್ತಿದೆ.**
5. ನಿಯಮದ ಪ್ರಕಾರ ಸಂಘದ ಸದಸ್ಯರುಗಳು **ಕೆ.ವೈ.ಸಿ (Know Your Customer)** ದಾಖಲಾತಿಗಳನ್ನು ಸಂಘಕ್ಕೆ ಸಲ್ಲಿಸಬೇಕಾಗಿರುತ್ತದೆ. ಆದ್ದರಿಂದ ಸದಸ್ಯರುಗಳು ತಮ್ಮ ಭಾವಚಿತ್ರ, ಆಧಾರ್ ಕಾರ್ಡ್ ಪ್ರತಿ, ಸೇವಾ ದೃಢೀಕರಣಪತ್ರ ಮತ್ತು ಮೈಸೂರು ನಗರದಲ್ಲಿ ಸ್ವಂತ ಅಥವಾ ಕುಟುಂಬದವರ ಹೆಸರಿನಲ್ಲಿ ನಿವೇಶನ ಹೊಂದಿಲ್ಲದಿರುವ ಬಗ್ಗೆ ದೃಢೀಕರಣಪತ್ರ ಇತ್ಯಾದಿ ದಾಖಲಾತಿಗಳನ್ನು ಸಂಘದ ಕಛೇರಿಗೆ ಸಲ್ಲಿಸುವುದು.
6. ಕರ್ನಾಟಕ ಸರ್ಕಾರವು ಜಾರಿಗೊಳಿಸಿರುವ ಸಹಕಾರ ಸಂಘಗಳ (ತಿದ್ದುಪಡಿ) ಅಧಿನಿಯಮ 2021ರ ರೀತ್ಯಾ, **ಐದು ವಾರ್ಷಿಕ ಮಹಾಸಭೆಗಳ ಪೈಕಿ ಕನಿಷ್ಠ ಎರಡು ವಾರ್ಷಿಕ ಮಹಾಸಭೆಗೆ ಹಾಜರಾಗದಿದ್ದಲ್ಲಿ ಚುನಾವಣೆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ಹಕ್ಕು ಇರುವುದಿಲ್ಲ.** ಈ ನಿಯಮವನ್ನು ಇತ್ತೀಚೆಗೆ ಕಟ್ಟುನಿಟ್ಟಾಗಿ ಪಾಲಿಸುತ್ತಿರುವುದರಿಂದ ಸದಸ್ಯರು ತಪ್ಪದೇ ವಾರ್ಷಿಕ ಮಹಾಸಭೆಯಲ್ಲಿ ಭಾಗವಹಿಸಲು ಕೋರಿದೆ. ಇದಲ್ಲದೆ ಸಂಘವು ಮಹಾಸಭೆ ದಿನದಂದು ನಿರ್ವಹಿಸುವ ನೋಂದಣಿ ಪುಸ್ತಕದಲ್ಲಿ ತಮ್ಮ ಸದಸ್ಯತ್ವ ಸಂಖ್ಯೆಯೊಂದಿಗೆ ಕಡ್ಡಾಯವಾಗಿ ಸಹಿ ಮಾಡಬೇಕಾಗಿರುತ್ತದೆ.
7. ವಾರ್ಷಿಕ ಮಹಾಸಭೆಗೆ ಸದಸ್ಯರಲ್ಲದೆ, **ಸಹ–ಸದಸ್ಯರು/ನಾಮ ಮಾತ್ರ ಸದಸ್ಯರು ಹಾಗೂ ಅವರ ಕುಟುಂಬದ ಸದಸ್ಯರು ಅಥವಾ ಇತರರು ಹಾಜರಾಗಲು ಅವಕಾಶವಿರುವುದಿಲ್ಲ.**
8. ಸದಸ್ಯರು ಸಭೆಗೆ ಹಾಜರಾಗುವಾಗ ಗುರುತಿನ ಚೀಟಿ ಮತ್ತು ಆಹ್ವಾನ ಪತ್ರಿಕೆಯನ್ನು ತರಬೇಕು.
9. ಸದಸ್ಯರ ನೋಂದಣಿ ಪ್ರಕ್ರಿಯೆಯು **ಬೆಳಗ್ಗೆ 9.00** ಗಂಟೆಗೆ ಪ್ರಾರಂಭವಾಗುತ್ತದೆ.

* * * *

2025–30ರ ಅವಧಿಯ ಆಡಳಿತ ಮಂಡಳಿ ಸದಸ್ಯರು

ಕ್ರ. ಸಂ.	ಹೆಸರು	ಪದನಾಮ	ದೂರವಾಣಿ ಸಂ.
1.	ಶ್ರೀ ಕೆ. ಗಂಗಾಧರಪ್ಪ	ಅಧ್ಯಕ್ಷರು	9945464261
2.	ಶ್ರೀ ಆರ್.ಎಸ್.ನಂಜುಂಡಸ್ವಾಮಿ	ಉಪಾಧ್ಯಕ್ಷರು	9740536004
3.	ಪ್ರೊ ಜಿ.ಸಿ.ರಾಜಣ್ಣ	ನಿರ್ದೇಶಕರು	8618147375
4.	ಶ್ರೀ ಪುಟ್ಟರಾಜಪ್ಪ ಎಸ್.	ನಿರ್ದೇಶಕರು	9741033336
5.	ಶ್ರೀ ಮಹೇಶ್ ಡಿ.ಎಸ್	ನಿರ್ದೇಶಕರು	9535586566
6.	ಶ್ರೀ ನಟರಾಜು ಕೆ.ಎಂ	ನಿರ್ದೇಶಕರು	9481321040
7.	ಪ್ರೊ ಹೆಚ್.ಎಸ್.ನಾಗೇಂದ್ರಕುಮಾರ್	ನಿರ್ದೇಶಕರು	9945729991
8.	ಶ್ರೀ ಎಸ್. ನಂಜುಂಡಸ್ವಾಮಿ	ನಿರ್ದೇಶಕರು	9449791256
9.	ಶ್ರೀ ಕೆ.ಎಸ್. ಗೌರಿಶಂಕರಸ್ವಾಮಿ	ನಿರ್ದೇಶಕರು	9741452271
10.	ಡಾ. ಶಂಕರಯ್ಯ	ನಿರ್ದೇಶಕರು	9482229678
11.	ಶ್ರೀ ಗವಿಯಪ್ಪದೇವರು ಆರ್	ನಿರ್ದೇಶಕರು	9845541667
12.	ಶ್ರೀಮತಿ ವಿನುತ ಕೆ.ಜಿ.	ನಿರ್ದೇಶಕರು	8088604678
13.	ಶ್ರೀಮತಿ ಗಾಯತ್ರಿ ಎಸ್.	ನಿರ್ದೇಶಕರು	9901011626

2025–26ನೇ ಸಾಲಿನ ಮಹಾಸಭೆಯ ಕಾರ್ಯಸೂಚಿ ಬಗ್ಗೆ ಟಿಪ್ಪಣಿ

ಕ್ರ.ಸಂ.	ವಿವರ	ಪುಟ ಸಂಖ್ಯೆ
1	ಮೀಟಿಂಗ್ ನೋಟಿಸ್ ಓದಿ ರೆಕಾರ್ಡ್ ಮಾಡುವುದು	6
2	ಹಿಂದಿನ ಮಹಾಸಭೆಯ ನಂತರ ನಿಧನರಾದ ಸಂಘದ ಸದಸ್ಯರುಗಳಿಗೆ ಶ್ರದ್ಧಾಂಜಲಿ ಅರ್ಪಣೆ	7
3	a) 2024–25ನೇ ಸಾಲಿನ ವಾರ್ಷಿಕ ಮಹಾಸಭೆ ನಿರ್ಣಯಗಳ ಮೇಲೆ ತೆಗೆದು ಕೊಂಡಿರುವ ಕ್ರಮಗಳ ಬಗ್ಗೆ ವರದಿ ಮಂಡನೆ b) ಆದಾಯ ತೆರಿಗೆ ಇಲಾಖೆ ಪ್ರಕರಣಗಳು	8–10
4	2025–26ನೇ ಸಾಲಿನ ವಾರ್ಷಿಕ ವರದಿ ಮಂಡನೆ	10–15
5	2026–27ನೇ ಸಾಲಿನ ಆಂಶಿಕ ವರದಿ ಮಂಡನೆ	15–17
6	2025–26ನೇ ಸಾಲಿನ ಲೆಕ್ಕಪರಿಶೋಧಿತ ಜಮಾ–ಖರ್ಚು, ಲಾಭ–ನಷ್ಟ, ಆಸ್ತಿ–ಜವಾಬ್ದಾರಿ ತಃಖ್ತೆಗಳು ಹಾಗೂ ಲೆಕ್ಕ ಪರಿಶೋಧನಾ ವರದಿಯಲ್ಲಿನ ಆಕ್ಷೇಪಣೆಗಳಿಗೆ ಆಡಳಿತ ಮಂಡಳಿಯ ಸಮಜಾಯಿಷಿ ಅನುಮೋದಿಸುವುದು.	17–21
7	ನಿರ್ದಿಷ್ಟ ಮೀಸಲು ನಿಧಿ ಮತ್ತು ಇತರೆ ನಿಧಿಗಳನ್ನು ಸೃಜಿಸುವುದು	21
8	2025–26ನೇ ಸಾಲಿನವರೆಗೆ ಸೃಜಿಸಿರುವ ವಿವಿಧ ನಿಧಿಗಳು	21
9	2026–27ನೇ ಸಾಲಿನ ಲೆಕ್ಕ ಪರಿಶೋಧಕರ ನೇಮಕಾತಿ	22
10	2027–28ನೇ ಸಾಲಿನ ಆಯವ್ಯಯ ಮಂಡನೆ ಹಾಗೂ ಅನುಮೋದನೆ	22–23
11	ವಿಚಾರಣಾ ವರದಿ ಪರಿಗಣನೆ	23–28
12	ಕಾರ್ಯನಿರ್ವಹಣೆಯಲ್ಲಿ ಕೊರತೆಯೇನಾದರೂ ಇದ್ದರೆ ಅವುಗಳನ್ನು ಪರಿಶೀಲಿಸುವುದು ಹಾಗೂ ಅವುಗಳನ್ನು ಸರಿಪಡಿಸಲು ಕ್ರಮವಹಿಸುವುದು	28
13	ಮುಂದಿನ ಸಾಲಿಗಾಗಿ ಮಂಡಳಿಯಿಂದ ಸಿದ್ದಪಡಿಸಲಾದ ಕಾರ್ಯಚಟುವಟಿಕೆಗಳನ್ನು ಅನುಮೋದಿಸುವುದು	29
14	ಸದಸ್ಯರುಗಳನ್ನು/ಸಹ–ಸದಸ್ಯರುಗಳನ್ನು ಸೇರಿಸಿಕೊಂಡಿರುವ ಮತ್ತು ತೆಗೆದುಹಾಕಿರುವ ಬಗೆಗಿನ ಟಿಪ್ಪಣಿ	29

15	ಉಪ ನಿಯಮಗಳಿಗನುಸಾರವಾಗಿ ತರಬಹುದಾದ ಇತರೆ ವಿಷಯಗಳನ್ನು ಅನುಮೋದಿಸುವುದು	29
16	ಆಡಳಿತಮಂಡಳಿ ಸಭೆಗಳ ಖರ್ಚು–ವೆಚ್ಚಗಳ ಪರಿಶೀಲನೆ	29
17	2025–26ನೇ ಸಾಲಿನಲ್ಲಿ ಜರುಗಿದ ಆಡಳಿತ ಮಂಡಳಿ ಸಭೆಗಳ ವಿವರ, ಹಾಜರಾತಿ ಮತ್ತು ನಿರ್ದೇಶಕರುಗಳಿಗೆ ಪಾವತಿಸಿರುವ ಸಭಾ ಭತ್ಯದ ವಿವರ	30
18	ಮೀಸಲು ಮತ್ತು ಇತರೆ ನಿಧಿಗಳ ವಾಸ್ತವ ಬಳಕೆ.	30
19	ಸಂಘದ ಠೇವಣಿಗಳನ್ನು ಹಾಗೂ ಹಣಕಾಸಿನ ವ್ಯವಹಾರಗಳನ್ನು ಸಹಕಾರ ಬ್ಯಾಂಕ್, ಷೆಡ್ಯೂಲ್ ಬ್ಯಾಂಕುಗಳಲ್ಲಿ ಹಾಗೂ ಆರ್‌ಬಿಐ ನಿಯಂತ್ರಣದಲ್ಲಿರುವ ಇತರೆ ಬ್ಯಾಂಕುಗಳಲ್ಲಿ ನಿರ್ವಹಿಸುವ ಕುರಿತು ಮಹಾಸಭೆಯ ಅನುಮೋದನೆ	30–31
20	ವಿವಿಧ ನ್ಯಾಯಾಲಯಗಳಲ್ಲಿರುವ ವ್ಯಾಜ್ಯಗಳ ವಿವರ	31–36
21	ಸದಸ್ಯರುಗಳಿಂದ ಸಕಾಲದಲ್ಲಿ ಬರುವಂತಹ ಪತ್ರಗಳ ಮಂಡನೆ	36
22	ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು	36
23	ಅಧ್ಯಕ್ಷರ ಭಾಷಣ	36
24	ವಂದನಾರ್ಪಣೆ	–

01. ದಿನಾಂಕ 20.9.2026ರ ಸರ್ವಸದಸ್ಯರ ಮೀಟಿಂಗ್ ನೋಟಿಸ್ ಓದಿ ರೆಕಾರ್ಡ್ ಮಾಡುವುದು

ಗೌರವಾನ್ವಿತ ಸದಸ್ಯರೆ,

2025–26ನೇ ಸಾಲಿನ ಸಂಘದ ಸರ್ವಸದಸ್ಯರ ವಾರ್ಷಿಕ ಮಹಾಸಭೆಯನ್ನು **ದಿನಾಂಕ 20.09.2026ರ ಭಾನುವಾರ ಬೆಳಗ್ಗೆ 10.00 ಗಂಟೆಗೆ** ಸಂಘದ ಅಧ್ಯಕ್ಷರಾದ ಶ್ರೀ ಕೆ. ಗಂಗಾಧರಪ್ಪ ಇವರ ಅಧ್ಯಕ್ಷತೆಯಲ್ಲಿ ವ್ಯವಸ್ಥೆಗೊಳಿಸಲಾಗಿದೆ.

ಮಾನ್ಯ ಸದಸ್ಯರೆಲ್ಲರೂ ಸಭೆಯಲ್ಲಿ ಭಾಗವಹಿಸಿ, ತಮ್ಮ ಸಲಹೆ ಸೂಚನೆಗಳನ್ನು ನೀಡಿ ಸಭೆಯನ್ನು ಯಶಸ್ವಿಗೊಳಿಸಬೇಕೆಂದು ಕೋರಲಾಗಿದೆ.

ಸ್ಥಳ : ಸುವರ್ಣ ಮಹೋತ್ಸವ ಭವನ
ಜೆಎಸ್ಎಸ್ ಕಾಲೇಜು, ಊಟಿ ರಸ್ತೆ
ಮೈಸೂರು – 570 025

ಸ್ಥಳ : ಮೈಸೂರು
ದಿನಾಂಕ : 20–09–2026

ಆಡಳಿತ ಮಂಡಳಿ ಅನುಮತಿ ಮೇರೆಗೆ
ಶ್ರೀ ದಿಲೀಪ ಎನ್.
ಕಾರ್ಯದರ್ಶಿ (ಪ್ರಭಾರ)

02. ಹಿಂದಿನ ಮಹಾಸಭೆ ನಂತರ ನಿಧನರಾದ ಸಂಘದ ಸದಸ್ಯರುಗಳಿಗೆ ಶ್ರದ್ಧಾಂಜಲಿ ಅರ್ಪಣೆ

ಕ್ರ.ಸಂ	ಹೆಸರು ಹುದ್ದೆ ಮತ್ತು ವಿಳಾಸ	ಸದಸ್ಯತ್ವ ಸಂಖ್ಯೆ
1	**ಶ್ರೀ ಶಿವಕುಮಾರಸ್ವಾಮಿ ಎಸ್.ಬಿ.** ಮನೆ ನಂ. 02, ಬ್ಲಾಕ್ ನಂ. 12, ಡಾ. ರಾಜ್‌ಕುಮಾರ್ ರಸ್ತೆ ಜೆಎಸ್‌ಎಸ್ ಮೊದಲನೇ ಹಂತ, ಮೈಸೂರು–570029	–
2	**ಶ್ರೀ ಮಾಲಿಂಗಣ್ಣ ಎಂ.ಎಲ್.** # 212, 4ನೇ ಕ್ರಾಸ್, ರಾಘವೇಂದ್ರನಗರ, ಮೈಸೂರು–11	1360
3	**ಶ್ರೀ ಉಮಾಪತಿ ಕೆ.ಆರ್.** ಮನೆ ನಂ. 07, ಬ್ಲಾಕ್ ನಂ. 06, ಡಾ. ರಾಜ್‌ಕುಮಾರ್ ರಸ್ತೆ ಜೆಎಸ್‌ಎಸ್ ಮೊದಲನೇ ಹಂತ, ಮೈಸೂರು–570029	162
4	**ಶ್ರೀ ನಿಂಗಪ್ಪ** ಮನೆ ನಂ. 1038, 17ನೇ ಮೇನ್, 2ನೇ ಕ್ರಾಸ್ ಪೋಲೀಸ್ ಲೇಔಟ್, ಎಸ್‌ವಿಪಿ ನಗರ ಮೈಸೂರು–570028	838

ಮನವಿ :

ಮೇಲೆ ನಮೂದಿಸಿರುವ ದಿವಂಗತ ಸದಸ್ಯರಲ್ಲದೆ, ಸಂಘದ ಸದಸ್ಯರಾಗಿದ್ದು ನಿಧನರಾದವರ ಬಗ್ಗೆ ಮಾಹಿತಿಗಳಿದ್ದರೆ ಮಹಾಸಭೆಗೆ ಮುಂಚಿತವಾಗಿ ಸಂಘದ ಕಛೇರಿಗೆ ಅಥವಾ ಮಹಾಸಭೆ ವೇಳೆಯಲ್ಲಿ ಸಭೆಗೆ ತಿಳಿಸಬೇಕೆಂದು ಕೋರಿದೆ.

03. a) 2024–25ನೇ ಸಾಲಿನ ವಾರ್ಷಿಕ ಮಹಾಸಭೆ ನಿರ್ಣಯಗಳ ಮೇಲೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ವರದಿ ಮಂಡನೆ

ಹಿಂದಿನ ಸಭೆ ನಡಾವಳಿ	ತೆಗೆದುಕೊಂಡ ಕ್ರಮಗಳು
ನಕಲಿ ರಶೀತಿ ಪುಸ್ತಕ ಮುದ್ರಿಸಿ ಸಂಘದ ನೌಕರರಾಗಿದ್ದ ಶ್ರೀ ಕೆ. ರಾಜೇಂದ್ರ ಮತ್ತು ಶ್ರೀ ಬಿ.ಪಿ. ಜಗದೀಶ್ ರವರುಗಳು ಹಣ ದುರುಪಯೋಗ ಮಾಡಿರುವ ಬಗ್ಗೆ.	ಸಂಘವು ಇವರುಗಳ ವಿರುದ್ಧ ಉದಯಗಿರಿ ಪೋಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು (FIR No 0054/2023 ದಿನಾಂಕ 19.04.2023) ದಾಖಲಿಸಿರುವುದಲ್ಲದೆ ದುರುಪಯೋಗಪಡಿಸಿಕೊಂಡಿರುವ ಮೊತ್ತವನ್ನು ವಸೂಲಿ ಮಾಡಲು ಕ್ರಮವಹಿಸಿದ್ದು, ಶ್ರೀ ಬಿ.ಪಿ ಜಗದೀಶ್ ರವರಿಂದ ರೂ 15 ಲಕ್ಷಗಳನ್ನು ವಸೂಲಿ ಮಾಡಲಾಗಿದೆ ಹಾಗೂ ಶ್ರೀ ಕೆ. ರಾಜೇಂದ್ರ ರವರಿಂದ ದುರುಪಯೋಗ ಮೊತ್ತ ವಸೂಲಿಗೆ ಸಂಘವು ಕ್ರಮವಹಿಸಿದೆ.
ನಾಲ್ಕನೇ ಹಂತದ ಬಡಾವಣೆ ಅಭಿವೃದ್ಧಿಗೆ ಏರ್ಪಡಿಸಿಕೊಂಡಿರುವ MoU ನವೀಕರಣ	2010–15ರ ಸಾಲಿನ ಆಡಳಿತಮಂಡಳಿಯು ನಾಲ್ಕನೇ ಹಂತದ ಅಭಿವೃದ್ಧಿದಾರರಾದ M/S ESS & ESS Eco Valley Inc., ಸಂಸ್ಥೆಯ ಜೊತೆ Turn Key ಆಧಾರದ ಮೇಲೆ MOU ಮಾಡಿಕೊಂಡು ಸದರಿ ಸಂಸ್ಥೆಗೆ ಒಟ್ಟು ರೂ 106,74,20,000/– ಗಳನ್ನು ಪಾವತಿಸಲಾಗಿದೆ. ಮುಂದುವರೆದು ಪ್ರಸ್ತುತ ಆಡಳಿತ ಮಂಡಳಿಯು ಅಭಿವೃದ್ಧಿದಾರರೊಂದಿಗೆ ಸಂಪರ್ಕದಲ್ಲಿದ್ದು MOU ನವೀಕರಣಕ್ಕೆ ಕ್ರಮವಹಿಸಿದೆ.
ಸಹಕಾರ ಸಂಘಗಳ ಅಪರ ನಿಬಂಧಕರ ನ್ಯಾಯಾಲಯದ ದಿನಾಂಕ 26.06.2020 ಮತ್ತು KAT ದಿನಾಂಕ 08.08.2024ರ ಆದೇಶಕ್ಕೆ ಸಂಘವು ಕರ್ನಾಟಕ ರಾಜ್ಯ ಉಚ್ಚನ್ಯಾಯಾಲಯದಲ್ಲಿ Writ Petition ದಾಖಲಿಸಿರುವ ಬಗ್ಗೆ.	ಸಂಘವು ಸಹಕಾರ ಸಂಘಗಳ ಅಪರ ನಿಬಂಧಕರ ನ್ಯಾಯಾಲಯ ಮತ್ತು KAT ಆದೇಶಗಳ ವಿರುದ್ಧ ಕರ್ನಾಟಕ ರಾಜ್ಯ ಉಚ್ಚನ್ಯಾಯಾಲಯದಲ್ಲಿ ದಿನಾಂಕ: 17.12.2024ರಂದು Writ Petition No 36252/2024, 36249/2024, 36187/2024, 36022/2024, 353/2025 ಮತ್ತು 06/2025 ದಾಖಲಿಸಿದ್ದು, ಮುಂದುವರೆದು ARCS ನ್ಯಾಯಾಲಯ ಆದೇಶದನ್ವಯ ನಿವೇಶನ ನೋಂದಣಿ ಮಾಡಿಕೊಡುವಂತೆ ಸದಸ್ಯರು ಮತ್ತು ಸಹ–ಸದಸ್ಯರು ಸ್ಥಳೀಯ ವಿವಿಧ ನ್ಯಾಯಾಲಯಗಳಲ್ಲಿ ದಾಖಲಿಸಿದ್ದ ದಾವೆಗಳಿಗೆ ದಿನಾಂಕ: 27.01.2025ರಂದು ತಡೆಯಾಜ್ಞೆ ದೊರೆತಿದೆ. ಈ ವ್ಯಾಜ್ಯವನ್ನು ಆದಷ್ಟು ಬೇಗ ಕಾನೂನಾತ್ಮಕವಾಗಿ ಬಗೆಹರಿಸಲು ಪ್ರಸ್ತುತ ಆಡಳಿತ ಮಂಡಳಿಯು ಕ್ರಮವಹಿಸಿದೆ. ಸದರಿ ವ್ಯಾಜ್ಯಗಳನ್ನು ಸಂಘದ ಪರವಾಗಿ ವಕೀಲರಾದ ಶ್ರೀ ಪಿ.ಆನಂದ್‌ರವರು ನಿರ್ವಹಿಸುತ್ತಿದ್ದಾರೆ.
ಮೂರನೇ ಹಂತದ ಬಡಾವಣೆ ಅಭಿವೃದ್ಧಿದಾರರಾಗಿದ್ದ M/S ಶಾಂಭವಿ ಡೆವಲಪರ್ಸ್‌ರವರ ವಿರುದ್ಧ ಕಾನೂನು ಕ್ರಮ ಜರುಗಿಸಿರುವ ಕುರಿತು.	2015–20 ರ ಸಂಘದ ಆಡಳಿತ ಮಂಡಲಿಯು M/S ಶಾಂಭವಿ ಡೆವಲಪರ್ಸ್‌ರೊಂದಿಗೆ ದಿನಾಂಕ: 24.02.2016 ರಂದು ಸಂಘವು ಖರೀದಿಸಿದ್ದ 40 ಎಕರೆ 4 3/4 ಗುಂಟೆ ಜೊತೆಗೆ 20 ಎಕರೆ ಹೆಚ್ಚುವರಿ ಜಮೀನನ್ನು ಖರೀದಿಸಿ 3ನೇ ಹಂತದ ಬಡಾವಣೆಯನ್ನು ನಿರ್ಮಿಸಿಕೊಡಬೇಕೆಂದು ಕರಾರು ಒಪ್ಪಂದವನ್ನು ಮಾಡಿಕೊಂಡು ಸದರಿ ಆಡಳಿತ

	ಮಂಡಳಿಯ ಅವಧಿಯಲ್ಲಿ ಒಟ್ಟು 14,84,39,770/–ರೂಗಳನ್ನು ಪಾವತಿಮಾಡಿತ್ತು, ಆದರೆ ಅಭಿವೃದ್ಧಿದಾರರು ಕೇವಲ 20 ಎಕರೆ 31 ಗುಂಟೆ ಜಮೀನಿನಲ್ಲಿ ಮಾತ್ರ ಅಭಿವೃದ್ಧಿ ಕೆಲಸಗಳನ್ನು ಪ್ರಾರಂಭಿಸಿ ಅರ್ಧಕ್ಕೆ ನಿಲ್ಲಿಸಿದ್ದರು. ಹೆಚ್ಚುವರಿ ಜಮೀನನ್ನೂ ಕೂಡ ಖರೀದಿಸಿರಲಿಲ್ಲ. ಆದ ಕಾರಣ ಇವರ ವಿರುದ್ಧ ಸಂಘವು Commercial Court and II ADDL, District & Sessions Judge, Mysuru ಇವರ ನ್ಯಾಯಾಲಯದಲ್ಲಿ ದಾವೆ (Com.OS.No122/2022) ದಾಖಲಿಸಲಾಗಿತ್ತು. ಸದರಿ ನ್ಯಾಯಾಲಯವು ದಿನಾಂಕ: 20.03.2024ರಂದು ಸಂಘದ ಪರವಾಗಿ ಆದೇಶ ನೀಡಿದ್ದು, ಆದೇಶದನ್ವಯ M/S ಶಾಂಭವಿ ಡೆವಲಪರ್ಸ್‌ರವರು 9.06 ಕೋಟಿಯನ್ನು ಸಂಘಕ್ಕೆ ದಿನಾಂಕ 19.06.2024 ರೊಳಗೆ ಹಿಂದುರುಗಿಸಬೇಕಾಗಿತ್ತು. ಆದರೆ ಈ ಅವಧಿಯೊಳಗೆ ಹಣ ಸಂಘಕ್ಕೆ ಜಮೆಯಾಗಿಲ್ಲದ ಕಾರಣ ಸದರಿಯವರ ವಿರುದ್ಧ ಸಂಘವು Execution Pettition No:Com.Ex/ 296/ 2024 ದಾಖಲಿಸಿರುತ್ತದೆ. ಪ್ರಕರಣದ ಕೆಲವು ಪ್ರತಿವಾದಿಗಳಿಗೆ ನೋಟಿಸ್ ತಲುಪದ ಕಾರಣ ನ್ಯಾಯಾಲಯವು ನೋಟಿಸ್‌ನ್ನು ಮರುಜಾರಿಗೊಳಿಸಿದೆ. ಮುಂಧಿನ ವಿಚಾರಣೆಯು ದಿನಾಂಕ: 05.09.2026ಕ್ಕೆ ನಿಗಧಿಯಾಗಿರುತ್ತದೆ. M/s Shambhavi Developers ರವರ ವಿರುದ್ಧ Cheque Bounce ಪ್ರಕರಣಕ್ಕೆ ಸಂಬಂಧಿಸಿದಂತೆ 5th ACJ & JMFC ನ್ಯಾಯಾಲಯದಲ್ಲಿ ದಾವಾ ಸಂಖ್ಯೆ CC No 2309/2021ದಾಖಲಿಸಿದ್ದು, ಮುಂದಿನ ವಿಚಾರಣೆಯು ದಿನಾಂಕ: 21.09.2026 ಕ್ಕೆ ನಿಗಧಿಯಾಗಿರುತ್ತದೆ.
ನಾಲ್ಕನೇ ಹಂತದ ಅಭಿವೃದ್ಧಿ ದಾರರಾದ M/S ESS & ESS Eco Valley Inc., ರವರಿಂದ ಬರಬೇಕಾದ TDS ಮೊತ್ತದ ಕುರಿತು	M/S ESS & ESS Eco Valley Inc., ರವರಿಂದ ಬರಬೇಕಾದ TDS ಬಾಬ್ತು ಹಣ 1,56,40,480/–ರೂ ಗಳನ್ನು ಸಂಘವು ಸದರಿಯವರಿಗೆ 4ನೇ ಹಂತದ ಬಡಾವಣೆ ಮುಂಗಡವನ್ನು ಪಾವತಿಸುವ ಸಂದರ್ಭದಲ್ಲಿ ಹೊಂದಾಣಿಕೆ ಮಾಡಿಕೊಳ್ಳಲು ಕ್ರಮವಹಿಸಲಾಗುವುದು.
ಐದನೇ ಹಂತದ ಬಡಾವಣೆ ಅಭಿವೃದ್ಧಿಗೆ M/S Vastava ರವರಿಗೆ ಸಂಘವು ಬಿಡುಗಡೆ ಮಾಡಿದ್ದ 3.75 ಕೋಟಿ ರೂ ಪೂರ್ಣವಾಗಿ ಸಂಘಕ್ಕೆ ಹಿಂದಿರು ಗಿದೆ. ಆದಾಗ್ಯೂ ಈ ಮುಂಗಡ ಹಣದ ಮೇಲಿನ ಬಡ್ಡಿ ವಸೂಲಾತಿ ಗಾಗಿ ಕ್ರಮ ಕೈಗೊಂಡಿರುವ ಕುರಿತು.	ಮೆ॥ ವಾಸ್ತವ ಡೆವಲಪರ್ಸ್‌ರವರಿಗೆ ಸಂಘವು ಬಿಡುಗಡೆ ಮಾಡಿದ್ದ ರೂ 3.75 ಕೋಟಿ ಪೂರ್ಣವಾಗಿ ಸಂಘಕ್ಕೆ ಹಿಂದಿರುಗಿದೆ. ಆದಾಗ್ಯೂ ಈ ಮುಂಗಡ ಹಣದ ಮೇಲಿನ ಬಡ್ಡಿ ವಸೂಲಾತಿಗಾಗಿ ಸಂಘವು ಮೆ॥ ವಾಸ್ತವ ಡೆವಲಪರ್ಸ್ ರವರ ವಿರುದ್ಧ ಸೀನಿಯರ್ ಸಿವಿಲ್ ಜಡ್ಜ್ ಮೈಸೂರು ಇವರ ನ್ಯಾಯಾಲಯದಲ್ಲಿ ದಾವಾ ಸಂಖ್ಯೆ OS.1231/2023 ಮೊಕದ್ದಮೆ ದಾಖಲಿಸಿದೆ. ಈ ಮೊಕದ್ದಮೆಯು ವಿಚಾರಣಾ ಹಂತದಲ್ಲಿದ್ದು, ಮುಂದಿನ ವಿಚಾರಣೆಯು ದಿನಾಂಕ: 22.09.2026 ಕ್ಕೆ ನಿಗಧಿಯಾಗಿರುತ್ತದೆ.

b) ಆದಾಯ ತೆರಿಗೆ ಇಲಾಖೆ ಪ್ರಕರಣಗಳು

ಈ ಕೆಳಕಂಡ ಆದಾಯ ತೆರಿಗೆ ಇಲಾಖೆ ಪ್ರಕರಣಗಳ ಇತ್ಯರ್ಥಕ್ಕೆ ಸಂಘವು ತೆಗೆದುಕೊಂಡಿರುವ ಕ್ರಮಗಳು

Financial Year	Details
2008-09	Appeal Pending at CIT (Appeals)
2009-10	Appeal Pending at CIT (Appeals)
2010-11	Appeal Pending at CIT (Appeals)
2011-12	Appeal Pending at CIT (Appeals)
2012-13	The Petition allowed by High Court of Karnataka

2012–13 ಹಣಕಾಸು ವರ್ಷದ ಸಂಘದ ಆದಾಯ ತೆರಿಗೆಗೆ ಸಂಬಂಧಿಸಿದಂತೆ ಸಂಘವು ಕರ್ನಾಟಕ ರಾಜ್ಯ ಉಚ್ಚನ್ಯಾಯಾಲಯದಲ್ಲಿ ಸಲ್ಲಿಸಿದ್ದ Writ ಅರ್ಜಿಯು ವಿಚಾರಣೆಗೆ ಒಳಪಟ್ಟು ಸದರಿ ಹಣಕಾಸು ವರ್ಷದ ಆದಾಯದ ತೆರಿಗೆ Returns ನ್ನು ಮರುಸಲ್ಲಿಕೆ ಮಾಡಲು ಅವಕಾಶ ನೀಡಿರುತ್ತದೆ. ಅದರಂತೆ ಸಂಘದ ಲೆಕ್ಕಪರಿಶೋಧಕರು 2012–13ನೇ ಸಾಲಿನ ಆದಾಯ ತೆರಿಗೆ Returns ನ್ನು ಮರುಸಲ್ಲಿಕೆ ಮಾಡಿದ್ದು ಸದರಿ ಹಣಕಾಸು ವರ್ಷಕ್ಕೆ ಸಂಘವು ಪಾವತಿಸಬೇಕಾಗಿದ್ದ ರೂ. 1,78,44,488/–ಗಳ ಆದಾಯ ತೆರಿಗೆ ಬಾಕಿಯನ್ನು ಆದಾಯತೆರಿಗೆ ಇಲಾಖೆಯು ಕೈಬಿಟ್ಟು, ದಿನಾಂಕ: 04.02.2026ರಂದು ರೂ 12,04,825/–ಗಳನ್ನು ಪಾವತಿಸುವಂತೆ ನೋಟೀಸ್ ನೀಡಿರುತ್ತದೆ. ಆದರೆ ಸಂಘದ ಲೆಕ್ಕಪರಿಶೋಧಕರು ಮತ್ತು ಆದಾಯ ತೆರಿಗೆತಜ್ಞರಾದ ಶ್ರೀ ಪಾರ್ಥಸಾರಥಿಯವರ ಸಲಹೆಯಂತೆ ಆದಾಯ ತೆರಿಗೆ ಬಾಬ್ತು ರೂ 12,04,825/–ಗಳನ್ನು ಕೈಬಿಡಲು National Faceless Appeal Centre (NFAC) ನಲ್ಲಿ ಮೇಲ್ಮನವಿ ಸಲ್ಲಿಸಲಾಗಿದೆ.

04. 2025–26ನೇ ಸಾಲಿನ ವಾರ್ಷಿಕ ವರದಿ

ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಕೃಪಾಶೀರ್ವಾದದಿಂದ ಸ್ಥಾಪಿತವಾದ ಈ ಸಂಘವು ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 7ರ ಅನ್ವಯ ದಿನಾಂಕ: 16/10/1975 ರಂದು Reg.No.JRM/RCS/699/1975 ಜಂಟಿ ನಿಬಂಧಕರು, ಮೈಸೂರು ಪ್ರಾಂತ, ಮೈಸೂರು ಇವರಿಂದ ನೋಂದಾಯಿಸಲ್ಪಟ್ಟಿರುತ್ತದೆ. ಇಂದಿನ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಕೃಪಾಶೀರ್ವಾದದಿಂದ ಹಾಗೂ ತಮ್ಮೆಲ್ಲರ ಸಹಕಾರದಿಂದ ಈ ಗೃಹ ನಿರ್ಮಾಣ ಸಹಕಾರ ಸಂಘವು ಸದಸ್ಯರ ಹಿತಾಸಕ್ತಿಗನುಗುಣವಾಗಿ ಕಾರ್ಯೋನ್ಮುಖವಾಗಿದೆ.

1. **ಕಾರ್ಯವ್ಯಾಪ್ತಿ**

ಸಂಘದ ಕಾರ್ಯವ್ಯಾಪ್ತಿಯು ಕರ್ನಾಟಕ ರಾಜ್ಯಕ್ಕೆ ಮಾತ್ರ ಸೀಮಿತವಾಗಿರುತ್ತದೆ.

2. **ಅಧಿಕೃತ ಷೇರು ಬಂಡವಾಳ**

ಸಂಘದ ಬೈಲಾ ಪ್ರಕಾರ ಸಂಘವು ಸದಸ್ಯರಿಂದ ಸಂಗ್ರಹಿಸಬಹುದಾದ ಅಧಿಕೃತ ಷೇರು ಬಂಡವಾಳ ರೂ. ಎರಡು ಕೋಟಿಗೆ ನಿಗದಿಪಡಿಸಲಾಗಿದೆ.

3. **ಸದಸ್ಯತ್ವ ಮತ್ತು ಷೇರು ಬಂಡವಾಳ**

ಸಂಘವು 31.03.2026ರ ಅಂತ್ಯಕ್ಕೆ 3703 ಸದಸ್ಯರು ಮತ್ತು 2038 ಸಹ–ಸದಸ್ಯರನ್ನು ಹೊಂದಿರುತ್ತದೆ. ಈ ಸದಸ್ಯರುಗಳಿಂದ ಪಡೆಯಲಾಗಿರುವ ಷೇರು ಬಂಡವಾಳದ ಒಟ್ಟು ಮೊತ್ತ 2025–26ನೇ ಸಾಲಿನ ಆಸ್ತಿ–ಜವಾಬ್ದಾರಿ ತಃಖ್ತೆ ರೀತ್ಯಾ 41,87,930/– ರೂ ಆಗಿರುತ್ತದೆ.

4. **ಆಪದ್ಧನ ಹಾಗೂ ಇತರೆ ನಿಧಿಗಳು**

2025–26ರ ಲೆಕ್ಕಪರಿಶೋಧನಾ ವರದಿಯ ಆಸ್ತಿ–ಜವಾಬ್ದಾರಿ ತಃಖ್ತೆ ರೀತ್ಯಾ 31.03.2026ರ ಅಂತ್ಯಕ್ಕೆ ಆಪದ್ಧನ ನಿಧಿ ಮೊತ್ತವು ರೂ.97,00,256/– ಇರುತ್ತದೆ. ಸದರಿ ಮೊತ್ತವನ್ನು ಸಹಕಾರ ಸಂಘಗಳ ಕಾಯಿದೆ ಹಾಗೂ ಸಂಘದ ಉಪನಿಯಮದ ಅನ್ವಯ ಎಂ.ಸಿ.ಡಿ.ಸಿ.ಸಿ. ಬ್ಯಾಂಕ್‌ನಲ್ಲಿ ಹೂಡಿಕೆ ಮಾಡಲಾಗಿದೆ.

5. **ವಿವಿಧ ಬಡಾವಣೆಗಳ ಅಭಿವೃದ್ಧಿಗೆ ಜಮೀನು ಖರೀದಿಸಿರುವುದು ಹಾಗೂ ಅಭಿವೃದ್ಧಿ ನಂತರ ನಿವೇಶನಗಳ ಹಂಚಿಕೆ ಮಾಡಿರುವ ವಿವರ ಈ ಕೆಳಕಂಡಂತಿದೆ.**

a. ಜೆಎಸ್‌ಎಸ್ ಮೊದಲ ಹಂತದ ಬಡಾವಣೆ : ಕ್ಯಾತಮಾರನಹಳ್ಳಿ ಮತ್ತು ಸಾತಗಳ್ಳಿ

ಡೆವಲಪರ್ಸ್ : M/s S.R. Construction Engineers Consultant & Contractors,
234-A, VI Cross, Gandhi Nagar, Bengaluru
Represented by : Sri S. Ramachandra

ಅಭಿವೃದ್ಧಿಪಡಿಸಲಾದ ಜಮೀನಿನ ವಿವರ

ಕ್ಯಾತಮಾರನಹಳ್ಳಿ	28 ಎಕರೆ 24 ಗುಂಟೆ
ಸಾತಗಳ್ಳಿ	22 ಎಕರೆ 21 ಗುಂಟೆ
ಒಟ್ಟು	**51 ಎಕರೆ 05 ಗುಂಟೆ**

ವಿವಿಧ ಅಳತೆಗಳ ಒಟ್ಟು 665 ನಿವೇಶನಗಳನ್ನು ಅಭಿವೃದ್ಧಿಪಡಿಸಿ 662 ನಿವೇಶನಗಳು ಹಂಚಿಕೆ ಮಾಡಲಾಗಿದೆ.

ಸರ್ವೆ ನಂ. 170ರ ಜಮೀನಿನಲ್ಲಿ ಅಭಿವೃದ್ಧಿಗೊಂಡಿರುವ ನಿವೇಶನಗಳು ಹಂಚಿಕೆಯಾಗಿದ್ದರೂ ನ್ಯಾಯಾಲಯದಲ್ಲಿ ಹೂಡಿರುವ ವ್ಯಾಜ್ಯದಿಂದಾಗಿ ಬ್ಲಾಕ್ ನಂ 21ರ ನಿವೇಶನ ಸಂಖ್ಯೆ 1 ಮತ್ತು 7 ರಲ್ಲಿ ಮಾತ್ರ ಮನೆಗಳ ನಿರ್ಮಾಣವಾಗಿದೆ. ರಾಜ್ಯ ಉಚ್ಚನ್ಯಾಯಾಲಯದಲ್ಲಿ ನಡೆಯುತ್ತಿರುವ ಈ ವ್ಯಾಜ್ಯ (RSA.1129/2008)ವನ್ನು ಸಂಘದ ಪರವಾಗಿ ವಕೀಲರಾದ ಶ್ರೀ ನವೀನ್ ಗುಡಿಕೋಟೆ, ಬೆಂಗಳೂರು ಇವರು ನಿರ್ವಹಿಸುತ್ತಿದ್ದಾರೆ.

b. ಜೆಎಸ್ಎಸ್ ಎರಡನೇ ಹಂತದ ಬಡಾವಣೆ

ಲಲಿತಾದ್ರಿಪುರ/ಯಾಂದಹಳ್ಳಿ ಮತ್ತು ಕುಪ್ಪಲೂರು/ಮಂಡಕಳ್ಳಿ

ಡೆವಲಪರ್ಸ್ : M/s ESS & ESS Echo Valley Inc,
Represented by Sri Srikanth Das

ಈ ಬಡಾವಣೆ ಅಭಿವೃದ್ಧಿಗೆ M/s. S.S. Developers ರವರೊಂದಿಗೆ ದಿನಾಂಕ 29.09.1995 ರಂದು ಕರಾರು ಒಪ್ಪಂದ ಮಾಡಿಕೊಳ್ಳಲಾಗಿತ್ತು. ಆದರೆ ಸದರಿಯವರು ಎರಡನೇ ಹಂತದ ಬಡಾವಣೆ ಅಭಿವೃದ್ಧಿ ಕಾರ್ಯಗಳನ್ನು ಪೂರ್ಣಗೊಳಿಸುವಲ್ಲಿ ವಿಳಂಬವಾದ್ದರಿಂದ M/S S.S Developers ರವರೊಂದಿಗಿನ ಒಪ್ಪಂದ ಅಂತ್ಯಗೊಳಿಸಿ M/s ESS & ESS Echo Valley Inc, Represented by Sri Srikanth Das ಇವರೊಂದಿಗೆ ದಿನಾಂಕ 09.05.2011 ರಂದು ಕರಾರು ಏರ್ಪಡಿಸಿಕೊಳ್ಳಲಾಗಿದೆ.

ಜಮೀನಿನ ವಿವರ :

(i)	ಲಲಿತಾದ್ರಿಪುರ	62 ಎಕರೆ 39 ½ ಗುಂಟೆ
(ii)	ಯಾಂದಹಳ್ಳಿ	29 ಎಕರೆ 7 ½ ಗುಂಟೆ
(iii)	ಕುಪ್ಪಲೂರು	12 ಎಕರೆ 35 ಗುಂಟೆ
(iv)	ಮಂಡಕಳ್ಳಿ	6 ಎಕರೆ
	ಒಟ್ಟು	**111 ಎಕರೆ 02 ಗುಂಟೆ**

ಲಲಿತಾದ್ರಿಪುರ–ಯಾಂದಹಳ್ಳಿ ಬಡಾವಣೆಯಲ್ಲಿ ಒಟ್ಟು 1187 ನಿವೇಶನಗಳನ್ನು ರಚಿಸಿ, ಅಭಿವೃದ್ಧಿಪಡಿಸಲಾಗಿದ್ದು, ಇದರಲ್ಲಿ ಈಗಾಗಲೇ ಶೇ 95 ರಷ್ಟು ನಿವೇಶನಗಳನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಬಿಡುಗಡೆ ಮಾಡಿರುತ್ತದೆ. ಶೇ 5 ರಷ್ಟು ನಿವೇಶನಗಳು ಬಿಡುಗಡೆಗೆ ಬಾಕಿ ಇರುತ್ತದೆ.

ಕುಪ್ಪಲೂರು–ಮಂಡಕಳ್ಳಿ ಬಡಾವಣೆಯಲ್ಲಿ ಒಟ್ಟು 280 ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ಶೇ 100 ರಷ್ಟು ನಿವೇಶನಗಳು ಮುಡಾದಿಂದ ಬಿಡುಗಡೆಯಾಗಿರುತ್ತವೆ.

ಮಂಡಕಳ್ಳಿ ಗ್ರಾಮದ ಸರ್ವೆ 306/1ರಲ್ಲಿ ಸಂಘಕ್ಕೆ ಸೇರಿದ 30 ಗುಂಟೆ ಜಮೀನನ್ನು ಸರ್ವೆ ನಂ. 306/2ರ ಹಿಡುವಳಿದಾರರು ಒತ್ತುವರಿ ಮಾಡಿಕೊಂಡಿದ್ದು ಇದರ ತೆರವಿಗೂ ಸಂಘವು ಕ್ರಮವಹಿಸಿರುತ್ತದೆ.

ಮಂಡಕಳ್ಳಿ ಗ್ರಾಮದ ಸರ್ವೆ 306ರ ಪಶ್ಚಿಮ ಭಾಗದಲ್ಲಿ ಖಾಸಗಿ ಬಡಾವಣೆಯವರು ನಮ್ಮ ಬಡಾವಣೆಯ 4 ನಿವೇಶನಗಳನ್ನು ಒತ್ತುವರಿಮಾಡಿ ರಸ್ತೆ ನಿರ್ಮಿಸಲು ಪ್ರಯತ್ನಿಸುತ್ತಿದ್ದು ಸಂಘವು ಒತ್ತುವರಿ ತೆರವುಗೊಳಿಸಲು ಕ್ರಮವಹಿಸಿದೆ.

c. ಜೆಎಸ್ಎಸ್ ಮೂರನೇ ಹಂತ

ಜಮೀನಿನ ವಿವರ :

ವರುಣ ಗ್ರಾಮ	40 ಎಕರೆ 4 ¾ ಗುಂಟೆ
ಒಟ್ಟು	**40 ಎಕರೆ 4 ¾ ಗುಂಟೆ**

ಡೆವಲಪರ್ಸ್ : M/s Chamundeshwari Constructions, Mysuru
Represented by : Sri Kemparaje Urs

M/s ಶಾಂಭವಿ ಡೆವಲಪರ್ಸ್‌ರೊಂದಿಗೆ ದಿನಾಂಕ 24/2/2016ರಂದು ಕರಾರು ಒಪ್ಪಂದ ಮಾಡಿಕೊಳ್ಳಲಾಗಿತ್ತು. ಈ ಕರಾರಿನನ್ವಯ ವರುಣಾ ಗ್ರಾಮದಲ್ಲಿ ಸಂಘವು ಖರೀದಿಸಿದ್ದ 40 ಎಕರೆ 4¾ ಗುಂಟೆ ಜಮೀನಲ್ಲದೆ ಹೆಚ್ಚುವರಿಯಾಗಿ 20 ಎಕರೆ ಜಮೀನನ್ನು ಸದರಿಯವರು ಸಂಘದ ಪರವಾಗಿ ಖರೀದಿಸಿ ಒಟ್ಟು 60 ಎಕರೆ ವಿಸ್ತೀರ್ಣದಲ್ಲಿ ಬಡಾವಣೆ ಅಭಿವೃದ್ಧಿಪಡಿಸಬೇಕಾಗಿತ್ತು. ಆದರೆ ಹೆಚ್ಚುವರಿ ಜಮೀನು ಖರೀದಿಗೆ ಡೆವಲಪರ್ಸ್‌ರವರು ಸಂಘದಿಂದ ಹಣ ಪಡೆದರೂ ಯಾವುದೇ ಜಮೀನು ಖರೀದಿಸಲಿಲ್ಲ. ಇದಲ್ಲದೆ ಪ್ರಥಮ ಹಂತದಲ್ಲಿ 20 ಎಕರೆ 31 ಗುಂಟೆ ಜಮೀನಿನಲ್ಲಿ ಬಡಾವಣೆ ಅಭಿವೃದ್ಧಿ ಕೆಲಸಗಳನ್ನು ಪ್ರಾರಂಭಿಸಿದರಾದರೂ ಅರ್ಧಕ್ಕೆ ಸ್ಥಗಿತಗೊಳಿಸಿದ್ದರು. M/s ಶಾಂಭವಿ ಡೆವಲಪರ್ಸ್ ರವರಿಗೆ 2015–20ರ ಅವಧಿಯ ಆಡಳಿತಮಂಡಳಿಯು ದಿನಾಂಕ 24.2.2016ರಿಂದ ದಿನಾಂಕ 20.01.2020ರ ಅವಧಿಯವರೆಗೆ ಒಟ್ಟು 14,84,39,770/– ರೂ.ಗಳನ್ನು ಹಂತ ಹಂತವಾಗಿ ಬಿಡುಗಡೆ ಮಾಡಿರುತ್ತದೆ.

M/s ಶಾಂಭವಿ ಡೆವಲಪರ್ಸ್‌ರವರು ಬಡಾವಣೆ ಅಭಿವೃದ್ಧಿ ಕಾಮಗಾರಿ ಸ್ಥಗಿತಗೊಳಿಸಿದ ಕಾರಣ ಸಂಘವು M/s Chamundeshwari Constructions, Mysuru ರವರೊಂದಿಗೆ 3ನೇ ಹಂತದ ಅಭಿವೃದ್ಧಿ ಕೆಲಸಗಳನ್ನು ಪೂರ್ಣಗೊಳಿಸಲು ದಿನಾಂಕ: 20.10.2023ರಂದು MOU ಏರ್ಪಡಿಸಿ ಕೊಳ್ಳಲಾಗಿದೆ.

- **ಜೆಎಸ್ಎಸ್ ವರುಣ ಫೇಸ್–1**

  20 ಎಕರೆ 31 ಗುಂಟೆ ಜಮೀನಿನಲ್ಲಿ ವಿವಿಧ ಅಳತೆಗಳ 247 ನಿವೇಶನಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ವರುಣ ಗ್ರಾಮ ಪಂಚಾಯಿತಿಯಿಂದ ಶೇ 60 ರಷ್ಟು ಅಂದರೆ 171

ನಿವೇಶನಗಳು ಈಗಾಗಲೇ ಬಿಡುಗಡೆಯಾಗಿದ್ದು, ಅವುಗಳಲ್ಲಿ 165 ನಿವೇಶನಗಳನ್ನು ಅರ್ಹ ಸದಸ್ಯರಿಗೆ ನೋಂದಣಿಮಾಡಿಕೊಡಲಾಗಿದೆ.

- **ಜೆಎಸ್ಎಸ್ ವರುಣ ಫೇಸ್–2**

  19 ಎಕರೆ 13ಱ ಗುಂಟೆ ಜಮೀನಿನ ಪೈಕಿ 09 ಎಕರೆ 34ಱ ಗುಂಟೆ ಜಮೀನಿನ ವಸತಿ ಬಡಾವಣೆ ನಕ್ಷೆಗೆ ವಿವಿಧ ದಿನಾಂಕಗಳಂದು ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು ಮೈಸೂರು ರವರು ಅನುಮೋದನೆ ನೀಡಿರುತ್ತಾರೆ. ವಿವರ ಕೆಳಕಂಡಂತಿದೆ.

ಕ್ರ ಸಂ	ಸರ್ವೆ ನಂಬರ್	ವಿಸ್ತೀರ್ಣ
1	137/1ಬಿ2, 138/1 & 138/3	3ಎ–16ಗು
2	108/2 & 3	2ಎ–39ಗು
3	115/6	1ಎ–25¾ಗು
4	120/1ಎ2 & 5	0ಎ–30ಗು
5	135/1ಎ3	01ಎ–04ಗು
	ಒಟ್ಟು	**09ಎಕರೆ –34¾ ಗುಂಟೆ**

d. ನಾಲ್ಕನೇ ಹಂತ : ಮಾದಾಪುರ, ಜಂತಗಳ್ಳಿ ಮತ್ತು ಅರೆಗೌಡನಹಳ್ಳಿ ಗ್ರಾಮಗಳು

ಡೆವಲಪರ್ಸ್: M/s ESS & ESS Echo Valley Inc., Mysuru
Represented by : Sri Sreekanth Das

ನಾಲ್ಕನೇ ಹಂತದ ಬಡಾವಣೆಗೆ M/s ESS & ESS Echo Valley Inc.,ರೊಂದಿಗೆ ದಿನಾಂಕ 09.06.2011ರಲ್ಲಿ ಕರಾರು ಒಪ್ಪಂದ ಏರ್ಪಡಿಸಿಕೊಳ್ಳಲಾಗಿರುತ್ತದೆ. ಇವರು ಒಟ್ಟು 300 ಎಕರೆ ಜಮೀನನ್ನು ಖರೀದಿಸಿ ಅಭಿವೃದ್ಧಿಪಡಿಸುವುದಾಗಿ ಕರಾರು ಮಾಡಿಕೊಂಡಿರುತ್ತಾರೆ. ಈ ಹಂತಕ್ಕೆ ಒಟ್ಟು 2381 ನಿವೇಶನಾಕಾಂಕ್ಷಿಗಳಿದ್ದು ಇದರಲ್ಲಿ 644 ಸದಸ್ಯರು ಹಾಗೂ 1737 ಸಹ–ಸದಸ್ಯರುಗಳು ನಿವೇಶನ ಕೋರಿ ನಿವೇಶನ ಠೇವಣಿ ಪಾವತಿಸಿದ್ದಾರೆ.

M/s ESS & ESS Echo Valley Inc., ರವರೊಂದಿಗೆ ಏರ್ಪಡಿಸಿಕೊಂಡಿರುವ ಕರಾರಿನ ರೀತ್ಯಾ ಒಂದು ಚದರ ಅಡಿಗೆ ರೂ. 423/– ರಂತೆ 61,20,000 ಚದರಡಿಗಳನ್ನು ರೂ. 258,87,60,000/–

ಗಳಿಗೆ ಅಭಿವೃದ್ಧಿಪಡಿಸಿದ ನಿವೇಶನಗಳಿಗೆ ಒಪ್ಪಂದವಾಗಿರುತ್ತದೆ. ಈ ಒಪ್ಪಂದದ ರೀತ್ಯಾ ಸಂಘಕ್ಕೆ ಮೂಲೆ ನಿವೇಶನಗಳ ಹಕ್ಕು ಇರುವುದಿಲ್ಲ. ಈ ಬಡಾವಣೆ ಅಭಿವೃದ್ಧಿಗೆ ಸಂಘವು ರೂ.1,06,74,20,000/– ಗಳನ್ನು 2011 ರಿಂದ 2015ರ ಅವಧಿಯಲ್ಲಿ ಬಿಡುಗಡೆ ಮಾಡಿರುತ್ತದೆ.

ಮುಂದುವರೆದು ಪ್ರಸ್ತುತ ಆಡಳಿತ ಮಂಡಳಿಯು ಅಭಿವೃದ್ಧಿದಾರರೊಂದಿಗೆ MOU ನವೀಕರಣಕ್ಕೆ ಕ್ರಮವಹಿಸಿದ್ದು, ನವೀಕರಣವಾದ ನಂತರ ನಿವೇಶನಗಳನ್ನು ಸದಸ್ಯರು/ಸಹ–ಸದಸ್ಯರುಗಳಿಗೆ ಹಂಚಲು ಕ್ರಮವಹಿಸಲಾಗುವುದು.

05. 2025–26ನೇ ಸಾಲಿನ ಆಂಶಿಕ ವರದಿ

(a) ಜೆಎಸ್ಎಸ್ ಬಡಾವಣೆ ಮೊದಲನೇ ಹಂತ

ಸರ್ವೆ ನಂ 170ರ ಜಮೀನಿಗೆ ಸಂಬಂಧಿಸಿದಂತೆ ಉಚ್ಚನ್ಯಾಯಾಲಯದಲ್ಲಿರುವ ವ್ಯಾಜ್ಯವು ಆಗಸ್ಟ್ 2026ರ ಅಂತ್ಯದೊಳಗೆ ಲೀಸ್ಟ ಆಗಲಿದೆಯೆಂದು ಸಂಘದ ವಕೀಲರಾದ ಶ್ರೀ ನವೀನ್ ಗುಡಿಕೋಟೆಯವರು ತಿಳಿಸಿರುತ್ತಾರೆ.

(b) ಜೆಎಸ್ಎಸ್ ಬಡಾವಣೆ ಎರಡನೇ ಹಂತ

- ಲಲಿತಾದ್ರಿಪುರ–ಯಾಂದಳ್ಳಿ ಬಡಾವಣೆಯಲ್ಲಿ ನಿವೇಶನ 1,2,3&4 ಗಳನ್ನು ಒಗ್ಗೂಡಿಸಿ ಸಭಾಭವನ ನಿರ್ಮಿಸಲು ಸಂಘವು ಉದ್ದೇಶಿಸಿದ್ದು, ಈ ಸಂಬಂಧ ಸದರಿ ನಿವೇಶನಗಳನ್ನು ವಸತಿಯಿಂದ ವಾಣಿಜ್ಯ ಉದ್ದೇಶಕ್ಕಾಗಿ ಪರಿವರ್ತಿಸಿಕೊಡುವಂತೆ ನಗರ ಯೋಜನಾ ಸದಸ್ಯರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ಇವರಿಗೆ ದಿನಾಂಕ: 17.07.2026 ರಂದು ಪತ್ರ ಬರೆಯಲಾಗಿದೆ.
- ಲಲಿತಾದ್ರಿಪುರ–ಯಾಂದಳ್ಳಿ ಬಡಾವಣೆಯ ಸರ್ವೆ ನಂ 60/2 ರ ಜಮೀನನ್ನು ಸಂಘವು ಒತ್ತುವರಿಮಾಡಿ ನಿವೇಶನಗಳನ್ನು ರಚಿಸಿರುವುದು ಸರ್ವೆಯಿಂದ ಧೃಡಪಟ್ಟಿರುತ್ತದೆ. ಈ ಕಾರಣದಿಂದಾಗಿ MUDA ವು ಶೇ 5 ರಷ್ಟು ನಿವೇಶನಗಳನ್ನು ಬಿಡುಗಡೆಮಾಡಿರುವುದಿಲ್ಲ. ಈ ಜಮೀನಿನ ಪ್ರಸ್ತುತ ಮಾಲೀಕರಾದ ಶ್ರೀ ಪ್ರದೀಪ ರವರು ಸಂಘಕ್ಕೆ ಪತ್ರ ಬರೆದು ಈ ಸಮಸ್ಯೆಯನ್ನು ಸೌಹಾರ್ಧಯುತವಾಗಿ ಪರಸ್ಪರ ಒಪ್ಪಂದದ ಮುಖಾಂತರ ಭೂ–ವಿಸ್ತೀರ್ಣವನ್ನು ವಿನಿಮಯ ಮಾಡಿಕೊಂಡು ಬಗೆಹರಿಸಿಕೊಳ್ಳುವ ಇಂಗಿತವನ್ನು ತಿಳಿಸಿರುತ್ತಾರೆ. ಸದರಿಯವರು ಸಂಘದಿಂದ ಒತ್ತುವರಿಯಾಗಿರುವಷ್ಟು ಭೂ–ವಿಸ್ತೀರ್ಣದ ನಿವೇಶನಗಳನ್ನು ಬಯಸಿದ್ದು, ಈ ಸಮಸ್ಯೆಯನ್ನು ಬಗೆಹರಿಸದಿದ್ದಲ್ಲಿ ಮೂಡಾದಿಂದ ಬಿಡುಗಡೆಗೆ ಬಾಕಿ ಇರುವ ಶೇ 5 ರಷ್ಟು ನಿವೇಶನಗಳು

ಬಿಡುಗಡೆಯಾಗುವುದಿಲ್ಲ. ಆದ್ದರಿಂದ ಸದರಿ ಜಮೀನಿನ ಮಾಲೀಕರೊಡನೆ ಮಾತುಕತೆ ನಡೆಸಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳಲು ಪ್ರಸ್ತುತ ಆಡಳಿತಮಂಡಳಿಯು ಪ್ರಯತ್ನಿಸುತ್ತಿದೆ.

(c) ಜೆಎಸ್ಎಸ್ ಬಡಾವಣೆ ಮೂರನೇ ಹಂತ

- **ಜೆಎಸ್ಎಸ್ ವರುಣ ಫೇಸ್–1**

ಬಿಡುಗಡೆಗೆ ಬಾಕಿ ಇರುವ ಶೇ 40 ರಷ್ಟು ಅಂದರೆ 76 ನಿವೇಶನಗಳ ಬಿಡುಗಡೆಗೆ ಕ್ರಮವಹಿಸಲಾಗಿದ್ದು ಸಧ್ಯದಲ್ಲೇ ಬಿಡುಗಡೆಯಾಗಲಿವೆ.

- **ಜೆಎಸ್ಎಸ್ ವರುಣ ಫೇಸ್–2**

19 ಎಕರೆ 13 3/4ಗುಂಟೆ ಜಮೀನಿನ ಪೈಕಿ 07 ಎಕರೆ 04 ಗುಂಟೆ ಜಮೀನಿನ ವಸತಿ ಬಡಾವಣೆ ನಕ್ಷೆಗೆ ವಿವಿಧ ದಿನಾಂಕಗಳಂದು ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಕಛೇರಿ, ಮೈಸೂರು ರವರು ಅನುಮೋದನೆ ನೀಡಿರುತ್ತಾರೆ. ವಿವರ ಕೆಳಕಂಡಂತಿದೆ.

ಕ್ರ ಸಂ	ಸರ್ವೆ ನಂಬರ್	ವಿಸ್ತೀರ್ಣ
1	121/1	2ಎ–35ಗು
2	137/4	1ಎ–20ಗು
3	119/3	0ಎ–31ಗು
4	114/2	1ಎ–38ಗು
	ಒಟ್ಟು	**7 ಎಕರೆ –4 ಗುಂಟೆ**

ಉಳಿದ 02 ಎಕರೆ 15 ಗುಂಟೆ (ಸರ್ವೆ ನಂ 123/2ಎ4) ಜಮೀನಿನ ವಸತಿ ವಿನ್ಯಾಸ ನಕ್ಷೆ ಅನುಮೋದನೆಗೆ ಕ್ರಮವಹಿಸಲಾಗಿದೆ.

(d) 80ನೇ ಸ್ವಾತಂತ್ರ್ಯ ದಿನಾಚರಣೆ

80ನೇ ಸ್ವಾತಂತ್ರ್ಯ ದಿನಾಚರಣೆಯನ್ನು ದಿನಾಂಕ 15–8–2026 ರಂದು ಸಂಘದ ಕಛೇರಿಯಲ್ಲಿ ಬೆಳಗ್ಗೆ 8.00ಕ್ಕೆ ಆಯೋಜಿಸಲಾಗಿತ್ತು. ಸಂಘದ ಅಧ್ಯಕ್ಷರು ಹಾಗೂ ಮುಖ್ಯ ಅತಿಥಿಗಳಾದ ಪ್ರೊ. ಹೆಚ್.ಎಂ. ಮಹಾಲಿಂಗಪ್ಪ, ಇಂಗ್ಲಿಷ್ ಪ್ರಾಧ್ಯಾಪಕರು, ಮೈಸೂರು ಇವರುಗಳು ಧ್ವಜಾರೋಹಣ ಕಾರ್ಯಕ್ರಮವನ್ನು

ನೆರವೇರಿಸಿಕೊಟ್ಟರು. ಇವರೊಂದಿಗೆ ಈ ಕಾರ್ಯಕ್ರಮದಲ್ಲಿ ಸಂಘದ ನಿರ್ದೇಶಕರುಗಳು, ಕಛೇರಿ ಸಿಬ್ಬಂದಿಗಳು ಮತ್ತು ಮೊದಲನೇ ಹಂತದ ನಿವಾಸಿಗಳು ಉಪಸ್ಥಿತರಿದ್ದರು.

(e) ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 111ನೇ ಜಯಂತಿ ಆಚರಣೆ

ಪರಮಪೂಜ್ಯ ಜಗದ್ಗುರು ಡಾ ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 111ನೇ ಜಯಂತಿ ಮಹೋತ್ಸವ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ದಿನಾಂಕ 27.09.2026 ರಂದು ಜೆಎಸ್ಎಸ್ ಮೊದಲನೇ ಹಂತದ ಬಡಾವಣೆಯಲ್ಲಿ ಆಚರಿಸಲು ಆಡಳಿತ ಮಂಡಳಿಯು ತೀರ್ಮಾನಿಸಿರುತ್ತದೆ.

6. 2025–26ನೇ ಸಾಲಿನ ಲೆಕ್ಕಪರಿಶೋಧಿತ ಜಮಾ–ಖರ್ಚು, ಲಾಭ–ನಷ್ಟ, ಆಸ್ತಿ–ಜವಾಬ್ದಾರಿ ತಃಖ್ತೆಗಳು ಹಾಗೂ ಲೆಕ್ಕಪರಿಶೋಧನಾ ವರದಿಯಲ್ಲಿನ ಆಕ್ಷೇಪಣೆಗಳಿಗೆ ಆಡಳಿತ ಮಂಡಳಿಯ ಸಮಜಾಯಿಷಿ ಅನುಮೋದಿಸುವುದು

(a) 2025–26ನೇ ಸಾಲಿನ ಲೆಕ್ಕಪರಿಶೋಧಿತ ಜಮಾ–ಖರ್ಚು, ಲಾಭ–ನಷ್ಟ, ಆಸ್ತಿ–ಜವಾಬ್ದಾರಿ ತಃಖ್ತೆಗಳು

ವಿವರ : 2025–26ನೇ ಸಾಲಿನ ಲೆಕ್ಕಪರಿಶೋಧಿತ ಜಮಾ–ಖರ್ಚು, ಲಾಭ–ನಷ್ಟ, ಆಸ್ತಿ–ಜವಾಬ್ದಾರಿ ತಃಖ್ತೆಗಳನ್ನು ಪುಟ ಸಂಖ್ಯೆ 37 ರಿಂದ 48 ವರೆಗೆ ಮುದ್ರಿಸಲಾಗಿದೆ.

(b) ಲೆಕ್ಕಪರಿಶೋಧನಾ ವರದಿಯಲ್ಲಿನ ಆಕ್ಷೇಪಣೆಗಳಿಗೆ ಆಡಳಿತ ಮಂಡಳಿಯ ಸಮಜಾಯಿಷಿ

ಕ್ರ.ಸಂ	ಸಲಹೆ ಹಾಗೂ ಸೂಚನೆಗಳು	ಸಮಜಾಯಿಷಿ
1	ಹಿಂದಿನ ಸಾಲಿನಿಂದ ಅಮಾನತ್ ಲೆಕ್ಕಗಳು ಮುಂದುವರೆದುಕೊಂಡು ಬಂದಿದ್ದು, ಈ ಬಗ್ಗೆ ಆಡಳಿತ ಮಂಡಳಿಯವರು ಗಮನಹರಿಸಿ ಅಮಾನತ್ ಲೆಕ್ಕಗಳಿಗೆ ಸರಿಯಾದ ದಾಖಲಾತಿಗಳನ್ನು ಹಾಜರುಪಡಿಸಿ ಅಮಾನತ್ ಲೆಕ್ಕಗಳನ್ನು ಸಂಬಂಧಪಟ್ಟ ಖಾತೆಗಳಿಗೆ ವರ್ಗಾವಣೆ ಮಾಡಲು ಸೂಚಿಸಲಾಗಿದೆ.	ಹಿಂದಿನ ಸಾಲಿನಿಂದ ಅಮಾನತ್ ಲೆಕ್ಕಗಳು ಮುಂದುವರೆದುಕೊಂಡು ಬಂದಿದ್ದು, ಇದರಲ್ಲಿ ಬಹುಪಾಲು ಲೆಕ್ಕಗಳು 4ನೇ ಹಂತದ ನಿವೇಶನ ಠೇವಣಿಗೆ ಸಂಬಂಧಿಸಿರುತ್ತದೆ. 4ನೇ ಹಂತದ ನಿವೇಶನ ಠೇವಣಿದಾರರು ನೇರವಾಗಿ ಸಂಘದ ಬ್ಯಾಂಕ್ ಖಾತೆಗಳಿಗೆ ಠೇವಣಿಯನ್ನು ಜಮೆ ಮಾಡಿದ್ದು, ಸಂಘಕ್ಕೆ ಅಗತ್ಯ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಈ ಸಂಬಂಧ ಪರಿಶೀಲನೆ ಕಾರ್ಯವು ಪ್ರಗತಿಯಲ್ಲಿದ್ದು, ಸಂಪೂರ್ಣವಾಗಿ ದಾಖಲಾತಿಗಳು ಸಂಘಕ್ಕೆ ಲಭ್ಯವಾಗದ ಕಾರಣ

		ಪರಿಶೀಲನಾ ಕಾರ್ಯ ಪೂರ್ಣಗೊಂಡಿರುವುದಿಲ್ಲ, ಇದನ್ನು ಸರಿಪಡಿಸಲು ಕ್ರಮವಹಿಸಲಾಗಿದೆ.
2	2019–20 ನೇ ಸಾಲಿನಲ್ಲಿ ಗುತ್ತಿಗೆದಾರರು (ಮೇ॥ ಶಾಂಭವಿ ಡೆವಲಪರ್ಸ್) ನಿರ್ವಹಿಸಲು ಕಾಮಗಾರಿಯ ಬಿಲ್ಲುಗಳನ್ನು ಪಾವತಿಸಿದ ಮೊತ್ತ ದಿಂದ ವರಮಾನ ತೆರಿಗೆ ರೂ.1,38,795/– ಕಟಾಯಿಸಿರುವುದಿಲ್ಲ. ಸರ್ಕಾರಕ್ಕೆ ರೂ.1,38,795/– ಸಹಕಾರಿ ವತಿಯಿಂದ ಪಾವತಿಸಲಾಗಿದ್ದು, ಹಾಗೂ ಸಂಬಂಧಪಟ್ಟವರಿಂದ ವಸೂಲಿ ಮಾಡಲು ಆಡಳಿತ ಮಂಡಳಿಯವರಿಗೆ ಸೂಚಿಸ ಲಾಗಿತ್ತು ಆದರು ಈವರೆಗೆ ಯಾವುದೇ ವಸೂಲಾತಿ ಮಾಡಿರುವುದಿಲ್ಲ. ಇದರ ಬಗ್ಗೆ ಕ್ರಮ ಅಗತ್ಯ.	M/S Shambhavi Developers ರವರಿಂದ ರೂ.1,38,795/–ಗಳನ್ನು ವಸೂಲಿ ಸಂಬಂಧ ಸಂಘವು 5th ACJ & JMFC ನ್ಯಾಯಾಲಯದಲ್ಲಿ ದಾವೆ ಸಂಖ್ಯೆ CC.No.2309/2021 ದಾಖಲಿಸಿದೆ. ಸದರಿ ವ್ಯಾಜ್ಯವು ವಿಚಾರಣಾ ಹಂತದಲ್ಲಿದ್ದು ನ್ಯಾಯಾಲಯದ ಆದೇಶದ ರೀತ್ಯ ಸಂಘವು ಕ್ರಮವಹಿಸಲಾಗುವುದು.
3.	ಸದಸ್ಯರ ಷೇರು ಮೊತ್ತಕ್ಕೂ ಹಾಗೂ ಸಂಘದ ಕುಳುವಾರು ಪಟ್ಟಿಗೂ ವ್ಯತ್ಯಾಸ ಕಂಡುಬಂದಿದ್ದು, ಈ ಬಗ್ಗೆ ಆಡಳಿತ ಮಂಡಳಿಯವರು ಸೂಕ್ತಕ್ರಮ ಕೈಗೊಂಡು ಸರಿಯಾದ ಸದಸ್ಯರ ಹಾಗೂ ಸಹ ಸದಸ್ಯರ ಷೇರು ಕುಳುವಾರು ಪಟ್ಟಿಯನ್ನು ಹೊಂದಲು ಸೂಚಿಸಲಾಗಿದೆ	ವ್ಯತ್ಯಾಸವನ್ನು ಸರಿಪಡಿಸಲು ಕ್ರಮವಹಿಸಲಾಗಿದೆ.
4.	ಸಂಘದ ಉದ್ದೇಶಿತ ಬಡಾವಣೆಗಳನ್ನು ನಿಗಧಿತ ಅವಧಿಯೊಳಗೆ ಪೂರ್ಣಗೊಳಿಸಿ ಸದಸ್ಯರಿಗೆ ಹೆಚ್ಚಿನ ಹೊರೆಯಾಗದಂತೆ ಕ್ರಮವಿಡಲು ಆಡಳಿತ ಮಂಡಳಿಯವರಿಗೆ ಸೂಚಿಸಲಾಗಿದೆ.	ನಿಗಧಿತ ಅವಧಿಯೊಳಗೆ ಉದ್ದೇಶಿತ ಬಡಾವಣೆಯನ್ನು ಪೂರ್ಣಗೊಳಿಸಲು ಸಂಘವು ಪ್ರಯತ್ನಿಸುತ್ತಿದ್ದರೂ ಕೆಲವು ಕಾನೂನಾತ್ಮಕ ಸಮಸ್ಯೆಗಳಿಂದಾಗಿ ಬಡಾವಣೆ ಪ್ರಗತಿ ವಿಳಂಬವಾಗುತ್ತಿದೆ. ಕಾನೂನು ಸಮಸ್ಯೆಗಳನ್ನು ಬಗೆಹರಿಸಿಕೊಂಡು ಸಂಘವು ಬಡಾವಣೆಯ ಕಾಮಗಾರಿಯನ್ನು ಪೂರ್ಣಗೊಳಿಸಿ ಅರ್ಹ ಸದಸ್ಯರಿಗೆ ನಿವೇಶನ ಹಂಚಲು ಕ್ರಮ ವಹಿಸಲಾಗುವುದು.

5.	ಸಂಘದ ಎಲ್ಲಾ ಲೆಕ್ಕಪತ್ರಗಳನ್ನು ಗಣಕೀಕೃತ ಗೊಳಿಸಲು ಸೂಚಿಸಿದ್ದರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಈ ಬಗ್ಗೆ ಗಮನ ಹರಿಸಲು ಸೂಚಿಸಲಾಗಿದೆ.	ಸಂಘದ ಲೆಕ್ಕಪತ್ರಗಳನ್ನು Tally Software ಮೂಲಕ ನಿರ್ವಹಿಸಲಾಗುತ್ತಿದೆ. ಆದಾಗ್ಯೂ ಕೂಡ Customised Software ಅಳವಡಿಸಲು ಕ್ರಮವಹಿಸಲಾಗುವುದು.
6.	ಅಮಾನತ್ ಖಾತೆಯಲ್ಲಿ ಮೊತ್ತವಿದ್ದು ಈ ಮೊತ್ತವನ್ನು ಸರಿಯಾದ ದಾಖಲೆಗಳೊಂದಿಗೆ ವರ್ಗವಣೆ ಮಾಡಿಕೊಳ್ಳಲು ಸೂಚಿಸಲಾಗಿದೆ.	ಅಮಾನತ್ತು ಖಾತೆಯ ಮೊತ್ತವನ್ನು ಸೂಕ್ತ ದಾಖಲಾತಿಗಳನ್ನು ಪರಿಶೀಲಿಸಿ ವರ್ಗಾವಣೆ ಮಾಡಲು ಕ್ರಮವಹಿಸಲಾಗುವುದು.
7.	ಇಎಸ್ಎಸ್ & ಇಎಸ್ಎಸ್ ಇಕೋ ವ್ಯಾಲಿ ಇಂಕ್ ಇವರಿಂದ ರೂ. 1,56,40,480/–ಗಳು ಟಿಡಿಎಸ್ ಬಾಬ್ತು ಬಾಕಿಯಿದ್ದು ಹಾಗೆ ಈ ಬಾಬ್ತುವಿನ ವಿಚಾರವಾಗಿ ಯಾವುದೇ ವಿವರ ಒದಗಿಸಿರುವುದಿಲ್ಲ. ಈ ಬಗ್ಗೆ ಮೊತ್ತವನ್ನು ವಸೂಲಿ ಮಾಡಲು ಆಡಳಿತ ಮಂಡಳಿಯವರು ಕ್ರಮ ಕೈಗೊಳ್ಳಲು ಸೂಚಿಸಲಾಗಿತ್ತು ಆದರೆ ಈವರೆಗೆ ಯಾವುದೇ ರೀತಿಯಾದ ವಸೂಲಾತಿಯು ಕಂಡುಬಂದಿರುವುದಿಲ್ಲ. ಈ ಬಗ್ಗೆ ಗಮನಹರಿಸಲು ಸೂಚಿಸಲಾಗಿದೆ.	ಇಎಸ್ಎಸ್ & ಇಎಸ್ಎಸ್ ಇಕೋ ವ್ಯಾಲಿ ಇಂಕ್ ರವರಿಂದ ಬರಬೇಕಾದ ಟಿಡಿಎಸ್ ಬಾಬ್ತು ರೂ 1,56,40,480/– ಗಳನ್ನು ಸಂಘವು ಸದರಿಯವರಿಗೆ 4ನೇ ಹಂತದ ಬಡಾವಣೆಯ ಮುಂಗಡ ಪಾವತಿಸುವ ಸಂದರ್ಭದಲ್ಲಿ ಹೊಂದಾಣಿಕೆ ಮಾಡಿಕೊಳ್ಳಲು ಕ್ರಮವಹಿಸ ಲಾಗುವುದು.
8.	ಸದಸ್ಯರ ನಿವೇಶನ ಮುಂಗಡಗಳಿಗೂ ಮತ್ತು ಆಸ್ತಿ ಜವಾಬ್ದಾರಿ ತಃಖ್ತೆಯ ನಿವೇಶನ ಮುಂಗಡ ಕುಳುವಾರು ತಃಖ್ತೆಗೂ ತಾಳೆಯಾಗದೆ ಕುಳುವಾರು ವ್ಯತ್ಯಾಸ ಇರುವುದು ಕಂಡುಬಂದಿದ್ದು ಈ ಬಗ್ಗೆ ಕ್ರಮ ಅಗತ್ಯ.	ಸದಸ್ಯರ ನಿವೇಶನ ಮುಂಗಡ ಮೊತ್ತವು ಆಸ್ತಿ–ಜವಾಬ್ದಾರಿ ತಃಖ್ತೆಗೂ ಮತ್ತು ಕುಳುವಾರು ಪಟ್ಟಿಗೂ ವ್ಯತ್ಯಾಸವು ಹಿಂದಿನ ಸಾಲುಗಳಿಂದ ಮುಂದು ವರೆದಿದ್ದು ಇದನ್ನು ಸರಿಪಡಿಸಲು ಕ್ರಮ ವಹಿಸಲಾಗುವುದು.
9	ಸದರಿ ಸಹಕಾರಿಯು 24.02.2016 ರಲ್ಲಿ ಶಾಂಭವಿ ಡೆವಲಪರ್ಸ್‌ರವರಿಗೆ 3ನೇ ಹಂತದ ಬಡಾವಣೆ ನಿರ್ಮಾಣಕ್ಕೆ ಕರಾರು ಮಾಡಿಕೊಂಡಿದ್ದು ಅದರ ಅನ್ವಯ ಒಟ್ಟು ರೂ. 14,84,39,770/– ಗಳನ್ನು ನೀಡಲಾಗಿದ್ದು, ನಿರ್ಮಾಣ ಕಾಮಗಾರಿಯು ಅಪೂರ್ಣವಾಗಿದ್ದು ಸಂಘವು ಈ ಸಂಸ್ಥೆ ಮೇಲೆ ಕಾನೂನು ಕ್ರಮ ಜರುಗಿಸಿದ್ದು ಅದನ್ನು ಅದಷ್ಟು ಶೀಘ್ರವಾಗಿ ಇತ್ಯರ್ಥಗೊಳಿಸಲು ಸೂಚಿಸಲಾಗಿದೆ.	M/S ಶಾಂಭವಿ ಡೆವಲಪರ್ಸ್ ರವರಿಗೆ 2015–20ರ ಆಡಳಿತ ಮಂಡಳಿಯು ಪಾವತಿಸಿದ್ದ ಹೆಚ್ಚುವರಿ ಮೊತ್ತ ವಸೂಲಾತಿಗಾಗಿ ಕಾನೂನು ಕ್ರಮ ಜರುಗಿಸಲಾಗಿದ್ದು, ನ್ಯಾಯಾಲಯದ ಆದೇಶದ ರೀತ್ಯ ಸಂಘವು ಮುಂದಿನ ಕ್ರಮ ಕೈಗೊಳ್ಳಲಾಗುವುದು.

10.	ಸಂಘದ 4 ನೇ ಹಂತದ ನಿವೇಶನ ಖರೀದಿ ಮತ್ತು ಬಡಾವಣೆ ನಿರ್ಮಾಣ ಸಂಬಂಧ ಇಎಸ್ಎಸ್ & ಇಎಸ್ಎಸ್ ಇಕೋ ವ್ಯಾಲಿ ಸಂಸ್ಥೆಯವರಿಗೆ 2010–15 ನೇ ಸಾಲಿನ ಆಡಳಿತ ಮಂಡಳಿಯು ಒಟ್ಟು ರೂ. 106,74,20,000/– ಗಳನ್ನು ನೀಡಿರುತ್ತಾರೆ. ಸದರಿ ಸಂಸ್ಥೆಯು ಈ ವರೆಗೆ ಕಾಮಗಾರಿಯನ್ನು ನಿರ್ವಹಿಸಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಸಂಘಕ್ಕೆ ಸಲ್ಲಿಸಿರುವುದಿಲ್ಲ. ಹಾಗೆಯೇ ನಿವೇಶನ ಅಭಿವೃದ್ಧಿಯ ಬಗ್ಗೆ ಮಾಹಿತಿಯನ್ನು ನೀಡಿರುವುದಿಲ್ಲ. ಆದ್ದರಿಂದ ಸದರಿ ಸಂಸ್ಥೆಯಿಂದ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ಪಡೆಯಲು ಸೂಚಿಸಲಾಗಿದೆ.	ಸಂಘದ 2010–15ನೇ ಸಾಲಿನ ಆಡಳಿತಮಂಡಳಿಯು 4ನೇ ಹಂತದ ಬಡಾವಣೆಯನ್ನು Turn Key ಆಧಾರ ಮೇಲೆ ಇಎಸ್ಎಸ್ & ಇಎಸ್ಎಸ್ ಇಕೋ ವ್ಯಾಲಿ ಸಂಸ್ಥೆಯವರೊಂದಿಗೆ MOU ಮಾಡಿಕೊಂಡು ಮುಂಗಡವಾಗಿ ರೂ. 106,74,20,000/–ಗಳನ್ನು ಪಾವತಿಸಿದೆ. ಪ್ರಸ್ತುತ ಆಡಳಿತಮಂಡಳಿಯು ಸದರಿ ಸಂಸ್ಥೆಯೊಂದಿಗೆ ಪರಿಷ್ಕೃತ MOU ಮಾಡಿಕೊಂಡು ಅಭಿವೃದ್ಧಿಪಡಿಸಿರುವ ನಿವೇಶನಗಳನ್ನು ಪಡೆಯಲು ಕ್ರಮವಹಿಸಿದೆ.
11.	ಸಂಘವು ಬಡಾವಣೆ ನಿರ್ಮಾಣಮಾಡುವ ಅಭಿವೃದ್ಧಿದಾರರ ಪೂರ್ವ ಹಿನ್ನೆಲೆಯನ್ನು ಪರಿಶೀಲಿಸಿ ಮತ್ತು ಅವರ ಆರ್ಥಿಕ ತಃಖ್ತೆಗಳನ್ನು ಅವಲೋಕಿಸಿ ಮತ್ತು ಕಾಮಗಾರಿಗೆ ನೀಡಲಾದ ಮೊತ್ತಕ್ಕೆ ಸರಿಯಾದ ಭದ್ರತೆ ಮತ್ತು ಬ್ಯಾಂಕ್ ಗ್ಯಾರಂಟಿಯನ್ನು ತೆಗೆದುಕೊಳ್ಳಲು ಸೂಚಿಸ ಲಾಗಿದೆ.	ಸಂಘವು ಮುಂದೆ ಹೊಸ ಬಡಾವಣೆಯನ್ನು ರಚಿಸುವ ಸಂದರ್ಭದಲ್ಲಿ ಅಭಿವೃದ್ಧಿದಾರರೊಂದಿಗೆ MOU ಮಾಡಿಕೊಳ್ಳುವಾಗ ಅವರ ಆರ್ಥಿಕ ತಃಖ್ತೆಯನ್ನು ಅವಲೋಕಿಸಿ ಪೂರ್ವ ಹಿನ್ನಲೆಯನ್ನು ಪರಿಶೀಲಿಸಿ ಸೂಕ್ತ ಭದ್ರತೆಯನ್ನು ತೆಗೆದುಕೊಳ್ಳ ಲಾಗುವುದು.
12	ಸಂಘವು ವರದಿ ಸಾಲಿನಲ್ಲಿ ರೂ. 50 ಲಕ್ಷಗಳನ್ನು ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನಲ್ಲಿ ಠೇವಣಿಯನ್ನು ಇರಿಸಿರುತ್ತಾರೆ. ಇದು ಕಲಂ 58 ರ ಪ್ರಕಾರ ಉಲ್ಲಂಘನೆಯಾಗಿರುತ್ತದೆ.	ಸಂಘವು ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನಲ್ಲಿ ಹೂಡಿಕೆ ಮಾಡಲಾಗಿದ್ದ ರೂ. 50 ಲಕ್ಷ ನಿಶ್ಚಿತ ಠೇವಣಿಯನ್ನು ಹಿಂಪಡೆಯಲಾಗಿದೆ.
13	ಸಹಕಾರ ಸಂಘಗಳ (ತಿದ್ದುಪಡಿ) ಕಾಯ್ದೆ 2025 ರ ಪ್ರಕಾರ ಎಲ್ಲಾ ಆಡಳಿತ ಮಂಡಳಿಯ ನಿರ್ದೇಶಕರು ಹಾಗೂ ಸಂಘದ ಕಾರ್ಯದರ್ಶಿ ರವರ ಆಸ್ತಿ ಮತ್ತು ಜವಾಬ್ದಾರಿ ತೆಃಖ್ತೆಯನ್ನು ಸೂಕ್ತ ಸಹಕಾರಿ ಇಲಾಖೆಗೆ ಸಲ್ಲಿಸಲು ಸೂಚಿಸಲಾಗಿದೆ.	ಪ್ರಸ್ತುತ ಆಡಳಿತ ಮಂಡಳಿಯ ನಿರ್ದೇಶಕರು ಹಾಗೂ ಕಾರ್ಯದರ್ಶಿಯವರ ಆಸ್ತಿ & ಜವಾಬ್ದಾರಿ ತೆಃಖ್ತೆಯನ್ನು ಸಹಕಾರಿ ಇಲಾಖೆಗೆ ಸಲ್ಲಿಸಲು ಕ್ರಮವಹಿಸಲಾಗುವುದು.

14	ಸಹಕಾರ ಸಂಘಗಳ (ತಿದ್ದುಪಡಿ) ಕಾಯ್ದೆ 2025 ರ ಪ್ರಕಾರ ಸಂಘವು ಜಿಲ್ಲಾ ಸಹಕಾರಿ ಯೂನಿಯನ್ ಸದಸ್ಯತ್ವವನ್ನು ಹೊಂದಲು ಸೂಚಿಸಲಾಗಿದೆ.	ಸಂಘವು ಜಿಲ್ಲಾ ಸಹಕಾರಿ ಯೂನಿಯನ್ ಸದಸ್ಯತ್ವ ಹೊಂದಲು ಕ್ರಮವಹಿಸುವುದು.

7. ನಿರ್ಧಿಷ್ಟ ಮೀಸಲು ನಿಧಿ ಮತ್ತು ಇತರೆ ನಿಧಿಗಳನ್ನು ಸೃಜಿಸುವುದು

2025–26ನೇ ಸಾಲಿನಲ್ಲಿ ಸಂಘಕ್ಕೆ ನಿವ್ವಳ ನಷ್ಟ ರೂ 6,44,405/– ಆಗಿರುತ್ತದೆ. ಆದ್ದರಿಂದ ಮೀಸಲು ನಿಧಿ ಮತ್ತು ಇತರೆ ನಿಧಿಗಳನ್ನು ಸೃಜಿಸಲಾಗುವುದಿಲ್ಲ.

8. 2025–26ನೇ ಸಾಲಿನವರೆಗೆ ಸೃಜಿಸಿರುವ ವಿವಿಧ ನಿಧಿಗಳು

ಕ್ರ..ಸಂ	ನಿಧಿಗಳ ವಿವರ	31.03.2025	2025–26ನೇ ಸಾಲಿನಲ್ಲಿ ಸೃಜಿಸಿರುವುದು	31.03.2026
1	ಅಪದ್ದನ ನಿಧಿ	36,89,038	60,11,218	97,00,256
2	ಸಹಕಾರ ಶಿಕ್ಷಣ ನಿಧಿ	–	1,29,869	–
3	ಧರ್ಮದ ನಿಧಿ	1,56,543	6,00,426	7,56,969
4	ಕಟ್ಟಡದ ನಿಧಿ	3,69,048	4,14,026	7,83,074
5	ಸದಸ್ಯರ ಮರಣೋತ್ತರ ನಿಧಿ	2,67,288	3,72,624	6,39,912
6	ಸಹಕಾರ ಅಭಿವೃದ್ಧಿ ನಿಧಿ	–	3,16,014	3,16,014
7	ಗ್ರಾಜ್ಯುಯಿಟಿ ನಿಧಿ	–	2,59,235	2,59,235
8	ವಿದ್ಯಾರ್ಥಿ ವೇತನ ನಿಧಿ	–	3,35,361	3,35,361

- 2024–25ನೇ ಸಾಲಿನ ಲಾಭಾಂಶ ವಿಲೇವಾರಿಯಲ್ಲಿ ಸಹಕಾರ ಶಿಕ್ಷಣ ನಿಧಿ ರೂ.1,29,869/– ಗಳನ್ನು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಲ, ಬೆಂಗಳೂರು ರವರಿಗೆ ಪಾವತಿಸಲಾಗಿದೆ ಹಾಗೂ ಸದಸ್ಯರ ಪಾಲು ಬಂಡವಾಳದ ಮೇಲೆ ಸೃಜಿಸಿರುವ ನಿಧಿ ರೂ. 7,85,199/–ಗಳನ್ನು 2024–25ರ ವಾರ್ಷಿಕ ಮಹಾಸಭೆಯ ತೀರ್ಮಾನದಂತೆ ಸಂಘದ ಆಪದ್ದನ ನಿಧಿಗೆ ವರ್ಗಾಯಿಸಲಾಗಿದೆ.
- 2025–26ನೇ ಸಾಲಿನಲ್ಲಿ ಸಂಘವು 6,44,405/– ನಿವ್ವಳ ನಷ್ಟ ಹೊಂದಿರುತ್ತದೆ.

9. 2026–27ನೇ ಸಾಲಿಗೆ ಲೆಕ್ಕ ಪರಿಶೋಧಕರ ನೇಮಕಾತಿ

2025–26ನೇ ಸಾಲಿನ ಸಂಘದ ಲೆಕ್ಕಪತ್ರಗಳ ಪರಿಶೋಧನೆಯನ್ನು ಶ್ರೀ ಎಂ.ಸಿ ರಾಜೇಂದ್ರ, ಚಾರ್ಟರ್ಡ್ ಅಕೌಂಟೆಂಟ್, ಶಿವಮೊಗ್ಗ, ಇವರು ನಿರ್ವಹಿಸಿರುತ್ತಾರೆ. 2026–27ನೇ ಸಾಲಿನ ಲೆಕ್ಕಪರಿಶೋಧಕರ ನೇಮಕಾತಿಗಾಗಿ ಈ ಕೆಳಕಂಡ ಲೆಕ್ಕಪರಿಶೋಧಕರುಗಳಿಂದ ಅವಕಾಶ ಕೋರಿ ಪತ್ರಗಳು ಬಂದಿರುತ್ತವೆ. ಇವರುಗಳಲ್ಲಿ ಒಬ್ಬರನ್ನು 2026–27ನೇ ಸಾಲಿಗೆ ಸಂಘದ ಲೆಕ್ಕಪರಿಶೋಧಕರಾಗಿ ನೇಮಕಮಾಡಿಕೊಳ್ಳಲು ಅನುಮತಿ ಕೋರಲಾಗಿದೆ.

- H.C Manjunath, Chartered Accountant, Shimogga
- Subhash Patil & Co, Chartered Accountant, Shimogga
- E S & Associates, Chartered Accountants, Mysuru

10. 2027–28ನೇ ಸಾಲಿನ ಆಯವ್ಯಯ ಮಂಡನೆ ಮತ್ತು ಅನುಮೋದನೆ

(a) 2027–28ನೇ ಸಾಲಿನ ಆಯವ್ಯಯ ಪಟ್ಟಿಯನ್ನು ಸರ್ವಸದಸ್ಯರ ಸಭೆ ಅನುಮೋದನೆಗೆ ಮಂಡಿಸಲಾಗಿದೆ.

ಕ್ರ.ಸಂ.	ವಿವರ	2025–26ರ ಅಂದಾಜು	2025–26ರ ವೆಚ್ಚ	2025–26ರ ಅನುಮೋದಿತ ಆಯ–ವ್ಯಯಕ್ಕಿಂತ ಹೆಚ್ಚುವರಿ ವೆಚ್ಚಗಳು	2026–27ರ ಅಂದಾಜು	ಜುಲೈ–2026 ರವರೆಗೆ ಆಗಿರುವ ವೆಚ್ಚ	2027–28ರ ಅಂದಾಜು ವೆಚ್ಚ
1	ಸಿಬ್ಬಂದಿ ವೇತನ	20,00,000	18,21,640	–	23,00,000	6,28,745	23,00,000
2	ನಿರ್ವಹಣಾ ವೆಚ್ಚ :						
	(ಅ) ಮೊದಲ ಹಂತ		20,310	20,310	20,000		5,0000
	(ಆ) ಎರಡನೇ ಹಂತ	25,00,000	33,84,030	8,84,030	25,00,000	23,36,313	40,00,000
	(ಇ) ಮೂರನೇ ಹಂತ	5,00,000	1,65,747	–	10,00,000	56,262	10,00,000
3	ವಿದ್ಯುಚ್ಛಕ್ತಿ ಮತ್ತು ನೀರಿನ ವೆಚ್ಚ	25,000	18,362	–	20,000	4,433	25,000
4	ಪ್ರಿಂಟಿಂಗ್ ಮತ್ತು ಸ್ಟೇಷನರಿ	50,000	51,263	1,263	50,000	16,940	1,00,000
5	ಅಂಚೆ ಹಾಗೂ ಕೊರಿಯರ್ ವೆಚ್ಚ	50,000	35,966	–	60,000	470	75,000
6	ದೂರವಾಣಿ ವೆಚ್ಚ	15,000	9,222	–	15,000	2,839	15,000
7	ಲೆಕ್ಕಪರಿಶೋಧನಾ ಶುಲ್ಕ, ಟ್ಯಾಕ್ಸ್ ಆಡಿಟ್ ಶುಲ್ಕ, ಜಿ.ಎಸ್.ಟಿ ಮತ್ತು ಟಿ.ಡಿ.ಎಸ್ ಫೈಲಿಂಗ್ ವೆಚ್ಚ	6,00,000	4,38,000	–	6,00,000	–	7,00,000

8	ವಕೀಲರ ವೃತ್ತಿ ಶುಲ್ಕ	25,00,000	36,06,000	11,06,000	45,00,000	2,20,000	45,00,000
9	ವಾರ್ಷಿಕ ಮಹಾಸಭೆಯ ಖರ್ಚು	5,00,000	4,90,948	–	5,00,000	–	6,00,000
10	ಮಾಸಿಕ ಸಭಾ ಭತ್ಯ ಮತ್ತು ಸಭಾ ವೆಚ್ಚ	2,00,000	2,07,827	7,827	2,00,000	90,968	2,50,000
11	ಜಾಹೀರಾತು ವೆಚ್ಚ	2,00,000	6,30,078	4,30,078	2,00,000	25,000	3,00,000
12	ಸಹಕಾರ ಸಂಸ್ಥೆ ಮತ್ತು ಇತರ ಸಂಸ್ಥೆಗಳಿಗೆ ವಂತಿಕೆ	50,000	–	–	50,000	–	50,000
13	ಪ್ರಯಾಣ ವೆಚ್ಚ	1,00,000	1,65,569	65,569	2,00,000	59,663	2,50,000
14	ಪೀಠೋಪಕರಣ ಮತ್ತು ಕಂಪ್ಯೂಟರ್	1,50,000	2,45,497	95,497	2,00,000	–	2,00,000
15	ಕಛೇರಿ ವೆಚ್ಚ	3,00,000	1,78,064	–	3,00,000	54,882	3,00,000
16	ಪ್ರತಿಭಾ ಪುರಸ್ಕಾರ ವೆಚ್ಚ	20,000	72,500	52,500	20,000	–	50,000
17	ಇತರೆ ವೆಚ್ಚ	5,00,000	1,01,460	–	5,00,000	8,782	5,00,000
18	ಆದಾಯ ತೆರಿಗೆ ಪ್ರತಿನಿಧಿ ಮತ್ತು ಸಲಹಾ ವೆಚ್ಚ	2,00,000	2,03,000	3,000	2,00,000	–	2,00,000
19	ಆಸ್ತಿ ತೆರಿಗೆ ವೆಚ್ಚ	1,00,000	74,793	–	1,00,000	76,948	1,00,000
20	ಪರಮ ಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜಯಂತಿ ಮಹೋತ್ಸವ ವೆಚ್ಚ	3,00,000	8,88,655	5,88,655	3,00,000	–	6,00,000
21	ಚುನಾವಣೆ ವೆಚ್ಚ	–	85,391	85,391	–	–	–
22	ಜಿ.ಎಸ್.ಟಿ ಪಾವತಿ	–	5,22,506	5,22,506	–	1,29,780	5,00,000

11. ವಿಚಾರಣಾ ವರದಿ ಪರಿಗಣನೆ

(i) ನಿಬಂಧಕರು, ಸಹಕಾರ ಇಲಾಖೆ (ವಸತಿ ಮತ್ತು ಇತರೆ) ಇವರು ಸಹಕಾರ ಸಂಘಗಳ ಕಾಯಿದೆ 1959ರ ಕಲಂ 64ರಡಿ ಜರುಗಿದ ವಿಚಾರಣಾ ವರದಿಯ ಮೇಲೆ ಕಲಂ 68ರ ಆದೇಶ ಹೊರಡಿಸಿರುವ ಕುರಿತು

2015–20ರ ಅವಧಿಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳ ಕುರಿತು 10 ಆರೋಪಗಳ ಬಗ್ಗೆ (ಹೆಚ್ಚುವರಿ ಆರೋಪವೂ ಸೇರಿದಂತೆ) ಸಹಕಾರ ಸಂಘಗಳ ಕಾಯಿದೆ 1959ರ ಕಲಂ 64ರ ರೀತ್ಯಾ ಸಹಕಾರ ಸಂಘಗಳ ಉಪನಿಬಂಧಕರು ಚಾಮರಾಜನಗರ ಜಿಲ್ಲೆ, ಇವರು ವಿಚಾರಣೆ ನಡೆಸಿ ವರದಿ ನೀಡಿರುತ್ತಾರೆ. ಈ ವರದಿ ಆಧರಿಸಿ ಅಪರ ನಿಬಂಧಕರು ಪ್ರತಿ ಆರೋಪದ ಮೇಲೆ ಕರ್ನಾಟಕ ಸಹಕಾರ

ಸಂಘಗಳ ಕಾಯ್ದೆ 1959ರ ಕಲಂ 68 ರಡಿ ನಿರ್ದೇಶನ ಹೊರಡಿಸಿರುತ್ತಾರೆ. ಈ ನಿರ್ದೇಶನದನ್ವಯ ಸಂಘವು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಅಪರ ನಿಬಂಧಕರಿಗೆ ಆಗಿಂದಾಗ್ಗೆ ಸಂಘವು ಅನುಪಾಲನಾ ವರದಿ ಸಲ್ಲಿಸುತ್ತಿದೆ.

ಸಂಘವು ಸಲ್ಲಿಸುತ್ತಿದ್ದ ಅನುಪಾಲನಾ ವರದಿಯನ್ನು ಇಲಾಖೆಯು ವಿಮರ್ಶಿಸಿ ಆರೋಪ ಸಂಖ್ಯೆ 1, 2, 3, 5, 9, ಮತ್ತು ಹೆಚ್ಚುವರಿ ಆರೋಪ –1 ಈ ಆರೋಪಗಳನ್ನು ಕೈಬಿಡಲಾಗಿದೆ. ಉಳಿದಂತೆ ನಾಲ್ಕು ಆರೋಪಗಳ (ಆರೋಪ ಸಂಖ್ಯೆ 4, 6, 7, 8) ಬಗ್ಗೆ ಮಾತ್ರ ಸಂಘವು ಕ್ರಮವಹಿಸಬೇಕಾಗಿದೆ. ವಿವರ ಕೆಳಕಂಡಂತಿದೆ.

ಆರೋಪ ಸಂಖ್ಯೆ–4ರ ಇಲಾಖಾ ನಿರ್ದೇಶನ

ಈ ಆರೋಪಕ್ಕೆ ಸಂಬಂಧಿಸಿದಂತೆ ದಿನಾಂಕ: 13.08.2025ರ ಇಲಾಖಾ ನಿರ್ದೇಶನದಲ್ಲಿ Execution Petitionನ್ನು ಜರೂರು ಮುಕ್ತಾಯ ಮಾಡಲು ಕ್ರಮವಿಟ್ಟು ಮೆ॥ ಶಾಂಭವಿ ಡೆವಲಪರ್ಸ್‌ರವರಿಂದ ವಸೂಲಾಗಬೇಕಾದ ಮೊತ್ತವನ್ನು ವಸೂಲಿ ಮಾಡಲು ಸೂಚಿಸಿದೆ. ವಸೂಲಾಗದಿದ್ದಲ್ಲಿ ಕಲಂ 68ರ ನಿರ್ದೇಶನದಂತೆ ಆಯಾ ಅವಧಿಯಲ್ಲಿ ಕಾರ್ಯನಿರ್ವಹಿಸಿದ ಆಡಳಿತ ಮಂಡಳಿ ಸದಸ್ಯರುಗಳಿಂದ ಜಂಟಿಯಾಗಿ ಹಾಗೂ ಬಿಡಿ ಬಿಡಿಯಾಗಿ ವಸೂಲಿ ಮಾಡಿ ಅನುಪಾಲನಾ ವರದಿ ಸಲ್ಲಿಸಲು ಸೂಚಿಸಿರುತ್ತಾರೆ ಅದರಂತೆ ಸಂಘವು ಕ್ರಮವಹಿಸಿದೆ.

ಆರೋಪ ಸಂಖ್ಯೆ–6ರ ಇಲಾಖಾ ನಿರ್ದೇಶನ

ಸಂಘದ 2015–20ರ ಅವಧಿಯ ಆಡಳಿತಮಂಡಳಿಯು ನಿಯಮಾನುಸಾರ ಮಾಸಿಕ ಸಭೆಗಳನ್ನು ನಡೆಸುವುದರ ಜೊತೆಗೆ ಸುಮಾರು 35ಕ್ಕೂ ಹೆಚ್ಚಿನ ಸಭೆಗಳನ್ನು ತುರ್ತುಸಭೆ/ವಿಶೇಷ ಸಭೆಗಳನ್ನು ನಡೆಸಿದೆ. ಆದರೆ ರೆಗ್ಯುಲರ್ ಸಭೆಗಳಿಗೆ ಮತ್ತು ತುರ್ತು/ವಿಶೇಷ ಸಭೆಗಳಿಗೆ ನಿಯಮಾನುಸಾರ ಕಲಾಪ ಪಟ್ಟಿಯನ್ನು ನೀಡಿರುವುದಿಲ್ಲ. ಜೊತೆಗೆ ಸಂಘದ ಹಣ ಮಂಜೂರು ಮಾಡುವಾಗಲು ನಿಯಮಿತ ಕಲಾಪಗಳಿಲ್ಲದಿದ್ದರೂ ಸಭೆ ನಡೆಸಿ ನಿರ್ದೇಶಕರಿಗೆ ಭತ್ಯೆ ನೀಡಿರುವುದು ನಿಯಮಬಾಹಿರವಾಗಿದ್ದು, ಈ ಬಗ್ಗೆ ವಿಚಾರಣೆ ನಡೆಸಿ ಜವಾಬ್ದಾರಿ ನಿಗದಿಪಡಿಸುವುದು. ಈ ಆರೋಪಕ್ಕೆ ಸಂಬಂಧಿಸಿದಂತೆ ದಿನಾಂಕ: 13.08.2025 ರ ಇಲಾಖಾ ನಿರ್ದೇಶನದಲ್ಲಿ ಸಂಘವು ಈ ಸಂಬಂಧ ಸಹಕಾರ ಸಂಘಗಳ ಅಪರ ನಿಬಂಧಕರ ನ್ಯಾಯಾಲಯ, ಬೆಂಗಳೂರು ನಲ್ಲಿ ಕಲಂ 70 ರಡಿ ದಾವೆ ದಾಖಲಿಸಿರುವುದರಿಂದ ಸದರಿ ನ್ಯಾಯಾಲಯದ ಆದೇಶದ ರೀತ್ಯ ಕ್ರಮ ಕೈಗೊಂಡು ಅನುಪಾಲನಾ ವರದಿ ಸಲ್ಲಿಸಲು ಸೂಚಿಸಿರುತ್ತಾರೆ.

ಸಹಕಾರ ಸಂಘಗಳ ಅಪರ ನಿಬಂಧಕರ ನ್ಯಾಯಾಲಯದಲ್ಲಿ 2015–20ರ ಆಡಳಿತ ಮಂಡಳಿಯವರ ವಿರುದ್ಧ ಕಲಂ 70ರಡಿ ಸಭಾ ಭತ್ಯ ವಸೂಲಾತಿಗೆ ದಾಖಲಿಸಲಾಗಿದ್ದ ದಾವಾ ಸಂಖ್ಯೆ ANI (H&M)/D-2/MD/93/2024-25 ದಾವೆಯು ವಿಚಾರಣಾ ಹಂತದಲ್ಲಿರುತ್ತದೆ.

ಆರೋಪ ಸಂಖ್ಯೆ–7ರ ಇಲಾಖಾ ನಿರ್ದೇಶನ

ಆರೋಪಿತ ನೌಕರರಾದ ಶ್ರೀ ಜಗದೀಶ್ ಮತ್ತು ಶ್ರೀ ಕೆ. ರಾಜೇಂದ್ರ ಇವರುಗಳಿಂದ ದುರುಪಯೋಗವಾಗಿರುವ ಹಣ ವಸೂಲಾತಿಗೆ ಸಂಬಂಧಿಸಿದಂತೆ ದಿನಾಂಕ: 13.08.2025 ರ ಇಲಾಖಾ ನಿರ್ದೇಶನದಲ್ಲಿ ಸಂಘವು ಸಹಕಾರ ಸಂಘಗಳ ಅಪರ ನಿಬಂಧಕರ ನ್ಯಾಯಾಲಯ, ಬೆಂಗಳೂರು ನಲ್ಲಿ ಕಲಂ 70 ರಡಿ ದಾವೆ ದಾಖಲಿಸಿರುವುದರಿಂದ ಸದರಿ ನ್ಯಾಯಾಲಯದ ಆದೇಶದ ರೀತ್ಯ ಕ್ರಮ ಕೈಗೊಂಡು ಅನುಪಾಲನಾ ವರದಿ ಸಲ್ಲಿಸಲು ಸೂಚಿಸಿರುತ್ತಾರೆ.

ಹಣ ದುರುಪಯೋಗದ ಸಂಬಂಧ ಸಹಕಾರ ಸಂಘಗಳ ಅಪರ ನಿಬಂಧಕರು ಬೆಂಗಳೂರು ಇವರ ನ್ಯಾಯಾಲಯದಲ್ಲಿ ದಾಖಲಿಸಿದ್ದ ದಾವಾ ಸಂಖ್ಯೆ:ಅನಿ(ವ&ಇ)/ಡಿ2/ಎಂಡಿ/94/2024–25 ಸಂಘದ ಪರ ಆದೇಶವಾಗಿದ್ದು, ಸದರಿ ವ್ಯಾಜ್ಯದ ಪ್ರತಿವಾದಿಯಾಗಿರುವ ಶ್ರೀ ಬಿ.ಪಿ. ಜಗದೀಶ್ ರವರು ಹಣ ದುರುಪಯೋಗದ ಬಾಬ್ತಿನಲ್ಲಿ ರೂ.15 ಲಕ್ಷಗಳನ್ನು ಸಂಘಕ್ಕೆ ಪಾವತಿಸಿರುತ್ತಾರೆ. ಮತ್ತೊಬ್ಬ ಪ್ರತಿವಾದಿಯಾದ ಶ್ರೀ ಕೆ. ರಾಜೇಂದ್ರ ರವರಿಂದ ದುರುಪಯೋಗದ ಹಣ ವಸೂಲಾತಿಗೆ ಸಂಘವು ಕ್ರಮವಹಿಸಿದೆ.

ಆರೋಪ ಸಂಖ್ಯೆ–8ರ ಇಲಾಖಾ ನಿರ್ದೇಶನ

ಸಂಘದ 2ನೇ ಹಂತದ ಬಡಾವಣೆಯ ರಸ್ತೆ ಬದಿಯಲ್ಲಿ ಬೆಳೆಸಲಾಗಿದ್ದ ಸುಮಾರು 305 ಮರಗಳನ್ನು ಬಡಾವಣೆಯ ಉಸ್ತುವಾರಿಯಾಗಿರುವ ಉಪಾಧ್ಯಕ್ಷರಾಗಿದ್ದ ಗಂಗಾಧರ್‌ರವರ ಬೇಜವಾಬ್ದಾರಿತನದಿಂದ ಅರ್ಧಕ್ಕೆ ಕತ್ತರಿಸಲಾಗಿದೆ. ಈ ಬಗ್ಗೆ ಗಂಗಾಧರ್ ಮತ್ತು ಅಧ್ಯಕ್ಷರಾಗಿದ್ದ ಕೆ. ವೀರಣ್ಣ ಹಾಗೂ ಸಂಘದ ಇಂಜಿನಿಯರ್ ಚಂದ್ರಮೌಳಿಯವರ ವಿರುದ್ಧ ಅರಣ್ಯ ಇಲಾಖೆಯವರು FIR ದಾಖಲು ಮಾಡಿದ್ದು, ದಂಡ ಶುಲ್ಕ ರೂ 2.42,000/– ಗಳನ್ನು ವಸೂಲಿ ಮಾಡದೆ ಈ ದಂಡ ಶುಲ್ಕವನ್ನು ಸಂಘದಿಂದ ನೀಡಲಾಗಿರುವುದು ನಿಯಮಬಾಹಿರವಾಗಿದೆ. ಈ ಬಗ್ಗೆ ವಿಚಾರಣೆ ನಡೆಸಿ ಜವಾಬ್ದಾರಿ ನಿಗದಿಪಡಿಸುವುದು.

ಈ ಆರೋಪಕ್ಕೆ ಸಂಬಂಧಿಸಿದಂತೆ ದಿನಾಂಕ: 13.08.2025 ರ ಇಲಾಖಾ ನಿರ್ದೇಶನದಲ್ಲಿ ಸಂಘವು ಈ ಸಂಬಂಧ ಸಹಕಾರ ಸಂಘಗಳ ಅಪರ ನಿಬಂಧಕರ ನ್ಯಾಯಾಲಯ, ಬೆಂಗಳೂರು ನಲ್ಲಿ ಕಲಂ 70 ರಡಿ ದಾವೆ ದಾಖಲಿಸಿರುವುದರಿಂದ ಸದರಿ ನ್ಯಾಯಾಲಯದ ಆದೇಶದ ರೀತ್ಯ ಕ್ರಮ ಕೈಗೊಂಡು ಅನುಪಾಲನಾ ವರದಿ ಸಲ್ಲಿಸಲು ಸೂಚಿಸಿರುತ್ತಾರೆ.

ಸಹಕಾರ ಸಂಘಗಳ ಅಪರ ನಿಬಂಧಕರ ನ್ಯಾಯಾಲಯದಲ್ಲಿ 2015–20ರ ಆಡಳಿತ ಮಂಡಳಿಯವರ ವಿರುದ್ಧ ಕಲಂ 70ರಡಿ ಅರಣ್ಯ ಇಲಾಖೆಗೆ ಪಾವತಿಸಿದ ದಂಡ ವಸೂಲಾತಿಗೆ ದಾಖಲಿಸಿರುವ ದಾವಾ ಸಂಖ್ಯೆ ANI (H&M)/D-2/MD/92/2024-25 ದಾವೆಯು ವಿಚಾರಣಾ ಹಂತದಲ್ಲಿರುತ್ತದೆ.

(ii) 2010–15 ಮತ್ತು 2020–25ರ ಅವಧಿಯ ಅವ್ಯವಹಾರಗಳ ಕುರಿತು–ನಿಬಂಧಕರು, ಸಹಕಾರ ಇಲಾಖೆ (ವಸತಿ ಮತ್ತು ಇತರೆ) ಇವರು ಸಹಕಾರ ಸಂಘಗಳ ಕಾಯಿದೆ 1959ರ ಕಲಂ 64 ರಡಿ ಜರುಗಿದ ವಿಚಾರಣಾ ವರದಿಯ ಮೇಲೆ ಕಲಂ 68ರ ಆದೇಶ ಹೊರಡಿಸಿರುವ ಕುರಿತು

2010–15 ಮತ್ತು 2020–25ರ ಅವಧಿಯ ಅವ್ಯವಹಾರಗಳ ಕುರಿತು 7 ಆರೋಪಗಳನ್ನು ಪಟ್ಟಿ ಮಾಡಿ ಸಹಕಾರ ಸಂಘಗಳ ಕಾಯಿದೆ 1959ರ ಕಲಂ 64ರ ರೀತ್ಯಾ ವಿಚಾರಣೆ ನಡೆಸಲು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮೈಸೂರು ಉಪವಿಭಾಗ, ಮೈಸೂರು ಇವರನ್ನು ನೇಮಕ ಮಾಡಲಾಗಿತ್ತು. ಅದರಂತೆ ವಿಚಾರಣಾಧಿಕಾರಿಗಳು 2010–15 ಮತ್ತು 2020–25ರ ಅವಧಿಯಲ್ಲಿ ಆಗಿರುವ ಕರ್ತವ್ಯಲೋಪಗಳು ಹಾಗೂ ಹಣಕಾಸು ಅವ್ಯವಹಾರಗಳ ಬಗ್ಗೆ ವಿಚಾರಣೆ ನಡೆಸಿ ವರದಿಯನ್ನು ಸಹಕಾರ ಸಂಘಗಳ ಅಪರ ನಿಬಂಧಕರಿಗೆ ಸಲ್ಲಿಸಿರುತ್ತಾರೆ.

ಅಪರ ನಿಬಂಧಕರು, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 64ರ ವಿಚಾರಣಾ ವರದಿ ಆದರಿಸಿ ದಿನಾಂಕ 31.01.2025ರ ಪತ್ರದಲ್ಲಿ ಕಲಂ 68ರಡಿ ನಿರ್ದೇಶನ ನೀಡಿರುತ್ತದೆ. ಅದರಂತೆ ಸಂಘವು ಕಲಂ 68ರಡಿ ನಿರ್ದೇಶನದನ್ವಯ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಅಪರ ನಿಬಂಧಕರು, ಸಹಕಾರ ಇಲಾಖೆ (ವಸತಿ ಮತ್ತು ಇತರೆ) ಇವರಿಗೆ ಸಂಘವು ಆಗಿಂದ್ದಾಗ್ಗೆ ವರದಿ ಸಲ್ಲಿಸುತ್ತಿದೆ. ಸಂಘವು ಸಲ್ಲಿಸುತ್ತಿದ್ದ ಅನುಪಾಲನಾ ವರದಿಯನ್ನು ಇಲಾಖೆಯು ವಿಮರ್ಶಿಸಿ ನೀಡಿರುವ ನಿರ್ದೇಶನದಂತೆ ಅಂತಿಮವಾಗಿ ಆರೋಪ ಸಂಖ್ಯೆ 1, 3, 5 ಈ ಆರೋಪಗಳನ್ನು ಕೈಬಿಡಲಾಗಿದೆ. ಉಳಿದಂತೆ ನಾಲ್ಕು ಆರೋಪಗಳಿಗೆ (ಅರೋಪ ಸಂಖ್ಯೆ 2, 4, 6, 7) ಬಗ್ಗೆ ಮಾತ್ರ ಸಂಘವು ಕ್ರಮವಹಿಸಬೇಕಾಗಿದ್ದು, ವಿವರ ಕೆಳಕಂಡಂತಿದೆ.

ಆರೋಪ ಸಂಖ್ಯೆ–2ರ ಇಲಾಖಾ ನಿರ್ದೇಶನ

ಜೆಎಸ್ಎಸ್ ಮಹಾವಿದ್ಯಾಪೀಠದ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ಎರಡನೇ ಹಂತದ 137 ಮೂಲೆ ನಿವೇಶನಗಳನ್ನು ರೂ.700/– ಗಳಿಂದ 3000/– ಗಳಿಗೆ ಹರಾಜು ಮಾಡಿ ರೂ.220/– ರಂತೆ ನೋಂದಣಿ ಮಾಡಿಕೊಟ್ಟಿರುವ ಆರೋಪಕ್ಕೆ ಸಂಬಂಧಿಸಿದಂತೆ ಸ್ಪಷ್ಟ ಅನುಪಾಲನಾ ಸಲ್ಲಿಸಿರುವುದಿಲ್ಲ. ಆದ ಕಾರಣ ನಿಮ್ಮ ಅನುಪಾಲನೆಯನ್ನು ತಿರಸ್ಕರಿಸಿದೆ. ವಿಚಾರಣಾಧಿಕಾರಿಗಳು ಅಭಿಪ್ರಾಯಿಸಿರುವಂತೆ 2ನೇ ಹಂತದ ವಿವಿಧ ಅಳತೆಯ 136 ಮೂಲೆ ನಿವೇಶನಗಳನ್ನು ಹರಾಜು ಪ್ರಕ್ರಿಯೆ ಮೂಲಕ ಸದಸ್ಯರಿಗೆ ಹಂಚಿಕೆ ಮಾಡಿದ್ದು, ಇದರ ಒಟ್ಟು ಮೊತ್ತ ರೂ 31,00,23,615/– ಗಳಾಗಿದ್ದು, ಈ ಒಟ್ಟು ಮೊತ್ತಕ್ಕೆ ನೋಂದಣಿ ಶುಲ್ಕವನ್ನು ನಿಗದಿಪಡಿಸದೇ ಸರ್ಕಾರದ ಮಾರ್ಗಸೂಚಿ ದರದನ್ವಯ ನೋಂದಣಿ ಮಾಡಿಕೊಡಲು ತೀರ್ಮಾನಿಸಿರುವ ಅಂದಿನ ಆಡಳಿತ ಮಂಡಳಿಯ ನಿರ್ಣಯವು ನಿಯಮಬಾಹಿರವಾಗಿದ್ದು, ಸರ್ಕಾರಕ್ಕೆ ನಷ್ಟ ಉಂಟಾಗಿರುವುದು ಸಾಬೀತಾಗಿರುತ್ತದೆ ಎಂದು ತಿಳಿಸಿ ಈ ರೀತಿ ಆಡಳಿತ ಮಂಡಳಿಯ ನಿಯಮಬಾಹಿರ ನಿರ್ಣಯದಿಂದ ಸರ್ಕಾರಕ್ಕೆ ಉಂಟಾಗಿರುವ ನಷ್ಟವನ್ನು 136 ಸದಸ್ಯರ ಸಂಬಂಧದ ನೋಂದಣಿ ಪತ್ರಗಳನ್ನು ಪರಿಶೀಲಿಸಿ, ನಿವೇಶನಗಳ ಸಂಬಂಧ ಸದಸ್ಯರಿಂದ ಪಡೆದಿರುವ ಮೊತ್ತಕ್ಕನುಗುಣವಾಗಿ ನೋಂದಣಿ ಶುಲ್ಕವನ್ನು ಲೆಕ್ಕ ಹಾಕಿ ವಿಚಾರಣಾಧಿಕಾರಿಗಳ ಅಭಿಪ್ರಾಯದಂತೆ ಸಂಬಂಧಪಟ್ಟ ಫಲಾನುಭವಿ ಸದಸ್ಯರಿಂದ ವಸೂಲಿ ಮಾಡಿ ಸರ್ಕಾರದ ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಗೆ ಜಮಾ ಮಾಡಿ, ಪ್ರತಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಲು ಸೂಚಿಸಿದೆ. ತಪ್ಪಿದಲ್ಲಿ

ದಿನಾಂಕ: 07.04.2012 ರಂದು ನಿಯಮಬಾಹಿರ ನಿರ್ಣಯ ಕೈಗೊಂಡ ಅಂದಿನ ಆಡಳಿತ ಮಂಡಳಿಯ ಸದಸ್ಯರಿಂದ ಜಂಟಿಯಾಗಿ ಮತ್ತು ಬಿಡಿ ಬಿಡಿಯಾಗಿ ವಸೂಲಿ ಮಾಡಿ ಸರ್ಕಾರಕ್ಕೆ ಪಾವತಿಸಲು ಸೂಚಿಸಿರುತ್ತಾರೆ.

ದಿನಾಂಕ: 17.01.2025 ರ ಪತ್ರದಲ್ಲಿ ಉಪನೋಂದಣಾಧಿಕಾರಿಗಳು ಮೈಸೂರು ಪಶ್ಚಿಮ ರವರು ಸಂಘಕ್ಕೆ ನೋಂದಣಿ ಐಚ್ಛಿಕ/ನೋಂದಣಿಯೇತರ ದಸ್ತಾವೇಜುಗಳಿಗೆ ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಕಲಂ 67ಬಿ ಅನ್ವಯ ನಿಗಧಿತ ಮುದ್ರಾಂಕ ಶುಲ್ಕ ಪಾವತಿಯಾಗಿರುವ ಬಗ್ಗೆ ದಾಖಲಾತಿಗಳನ್ನು ಪರಿಶೀಲಿಸುವ ಕುರಿತು ದಿನಾಂಕ: 15.01.2025ರಂದು ಸಂಘದ ಕಛೇರಿಗೆ ಭೇಟಿ ನೀಡುವುದಾಗಿ ತಿಳಿಸಿರುತ್ತಾರೆ. ಆದರೆ ಸದರಿಯವರು ಇದುವರೆವಿಗೂ ಪರಿಶೀಲನೆಗೆ ಸಂಘದ ಕಛೇರಿಗೆ ಭೇಟಿ ನೀಡಿರುವುದಿಲ್ಲ. ಸದರಿಯವರು ಕಛೇರಿಗೆ ಭೇಟಿ ನೀಡಿ ದಾಖಲಾತಿಗಳನ್ನು ಪರಿಶೀಲಿಸಿ ವರದಿ ನೀಡಿದ ನಂತರ ಸಂಘವು ಕ್ರಮ ಕೈಗೊಳ್ಳುವುದು.

ಆರೋಪ ಸಂಖ್ಯೆ–4ರ ಇಲಾಖಾ ನಿರ್ದೇಶನ

